೧೬೬

ಪ್ರಚಾರ ಪುಸ್ತಕ ಮಾಲೆ

ದಿಗಂಬರ ಕವಿಗಳು

ಡಾ. ಆರ್.ವಿ.ಎಸ್. ಸುಂದರಂ

ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ

ಕೆಲವು ಸಾಹಿತ್ಯ ಕೃತಿಗಳು

೧. ಕುಮಾರವ್ಯಾಸ—ಎಸ್. ವಿ. ರಂಗಣ್ಣ
೨. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್
೩. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ
೪. ಪಂಪ—ತೀ. ನಂ. ಶ್ರೀಕಂಠಯ್ಯ
೫. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ
೬. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್
೭. ಭಾಸ—ಡಾ. ಎಚ್. ಎಲ್. ಹರಿಯಪ್ಪ
೮. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ
೯. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್
೧೦. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ
೧೧. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ
೧೨. ನಯಸೇನ—ಜಿ. ವೆಂಕಟಸುಬ್ಬಯ್ಯ
೧೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ
೧೪. ಲಕ್ಷ್ಮೀಶ—ಎನ್. ಅನಂತರಂಗಾಚಾರ್
೧೫. ಮುದ್ದಣ—ತ. ಸು. ಶಾಮರಾವ್
೧೬. ಜನಪದ ಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್
೧೭. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ
೧೮. ಮಹಾಭಾರತ—ಡಾ. ಕೆ. ಕೃಷ್ಣಮೂರ್ತಿ
೧೯. ನೇಮಿಚಂದ್ರ—ಎನ್. ಅನಂತರಂಗಾಚಾರ್
೨೦. ಶ್ರೀನಾಥ—ಕೆ. ವೆಂಕಟರಾಮಪ್ಪ
೨೧. ಷಡಕ್ಷರದೇವ—ದೇ. ಜವರೇಗೌಡ
೨೨. ಚಿತ್ರಾಂಗದಾ—ಉ. ಕಾ. ಸುಬ್ಬರಾಯಾಚಾರ್
೨೩. ಸಂಚಿಯ ಹೊನ್ನಮ್ಮ—ಎಚ್. ಎಂ. ಶಂಕರನಾರಾಯಣರಾವ್
೨೪. ವಾಲ್ಮೀಕಿ ರಾಮಾಯಣ—ಉ. ಕಾ. ಸುಬ್ಬರಾಯಾಚಾರ್
೨೫. ಮಹಾಕವಿ ಬಾಣ—ಟಿ. ಎಸ್. ಕೃಷ್ಣಮೂರ್ತಿ
೨೬. ತುಳಸೀದಾಸ—ಡಾ. ಹಿರಣ್ಮಯಿ
೨೭. ವೇಮನ—ಕೆ. ವೆಂಕಟರಾಮಪ್ಪ
೨೮. ಕನ್ನಡದಲ್ಲಿ ಅನುಭಾವ ಸಾಹಿತ್ಯ—ಡಾ. ಎಚ್. ತಿಪ್ಪೇರುದ್ರಸ್ವಾಮಿ
೨೯. ಅಲ್ಲಮಪ್ರಭು—ಡಾ. ಟಿ. ಜಿ. ಸಿದ್ಧಪ್ಪಾರಾಧ್ಯ

ಪ್ರಚಾರ ಪುಸ್ತಕಮಾಲೆ–೨೬೬

ದಿಗಂಬರ ಕವಿಗಳು

ಡಾ. ಆರ್. ವಿ. ಎಸ್. ಸುಂದರಂ

೧೯೯೮

ಮೊದಲನೆಯ ಮುದ್ರಣ: ೧೯೯೮
೫೦೦೦ ಪ್ರತಿಗಳು

ಪ್ರಸಾರಾಂಗದ ಪತ್ರದ ಕ್ರಮ ಸಂಖ್ಯೆ: ಪ್ರ ೫/೫೩೨೨/೯೭-೯೮
೧೯-೧೧-೧೯೯೭

ಬೆಲೆ: ರೂ. ೨-೦೦

ಪ್ರಕಾಶಕರು
ಡಾ. ಅರವಿಂದ ಮಾಲಗತ್ತಿ
ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ
ಮೈಸೂರು - ೫೭೦೦೦೬

ಮುದ್ರಕರು
ಶ್ರೀ ಬಿ. ಎಸ್. ಸಿದ್ದೇಗೌಡ
ನಿರ್ದೇಶಕರು
ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ
ಮೈಸೂರು - ೫೭೦೦೦೬

ಮುನ್ನುಡಿ

ವಿಶ್ವವಿದ್ಯಾನಿಲಯದ ವಿದ್ವತ್ತು ನಗರಗಳಲ್ಲಿ ಮಾತ್ರ ಕೇಂದ್ರೀಕೃತವಾಗದೆ ನಾಡಿನ ಮೂಲೆ ಮೂಲೆಗೂ ಪಸರಿಸಿ ಸಮಷ್ಟಿ ಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕೆಂಬ ಉದ್ದೇಶದಿಂದ ನಮ್ಮ ಪ್ರಸಾರಾಂಗ, ನಾಡಿನ ಉದ್ದಗಲಕ್ಕೂ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಂಸ್ಕೃತಿಯ ಪ್ರಸಾರ ಕಾರ್ಯವನ್ನು ಬಹಳ ಸಮರ್ಪಕವಾದ ರೀತಿಯಲ್ಲಿ ನೆರವೇರಿಸುತ್ತಿದೆ.

ಈ ಉಪನ್ಯಾಸಗಳು ವಿಶ್ವವಿದ್ಯಾನಿಲಯದ ಮೆಟ್ಟಿಲನ್ನು ಹತ್ತಲು ಅವಕಾಶವಿಲ್ಲದವರಿಗೆ ವಿಶ್ವವಿದ್ಯಾನಿಲಯದ ಜ್ಞಾನದ ಸೌಲಭ್ಯವನ್ನು ನೀಡಲು ನೆರವಾಗುತ್ತವೆ. ವಿಶ್ವವಿದ್ಯಾನಿಲಯದಲ್ಲಿ ಮಾಹಿತಿ ಗಳಿಸಿ, ನಾಡಿನ ಬೇರೆ ಬೇರೆ ಜಾಗಗಳಲ್ಲಿ ವಿವಿಧ ಕಾರ್ಯರಂಗಗಳಲ್ಲಿ ನಿರತವಾಗಿರುವ ಜನರಿಗೆ ಮಾರ್ಗದರ್ಶಕವಾಗುತ್ತವೆ. ನಮ್ಮ ಸಮಾಜದಲ್ಲಿನ ಭೇದ–ಭಾವಗಳನ್ನು ಹೋಗಲಾಡಿಸಿ ಸಮಾನತೆಯನ್ನು ಸ್ಥಾಪಿಸಲು ಸಹಾಯಕವಾಗುತ್ತವೆ. ವಿಶ್ವವಿದ್ಯಾನಿಲಯಕ್ಕೂ ಸಾಮಾನ್ಯ ಜನತೆಗೂ ಮಧ್ಯೆ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗುತ್ತವೆ. ಜನರಲ್ಲಿ ಜ್ಞಾನೋದಯವನ್ನುಂಟುಮಾಡಿ, ವಿಶಾಲ ಭಾವನೆ ಮೂಡುವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಿಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಿಗೆಗಳನ್ನು ಕೊಂಡು ಓದಿ ತಿಳುವಳಿಕೆ ಪಡೆಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಹೆಚ್ಚು ಜನಪ್ರಿಯವಾಗಿವೆ. ಪುಸ್ತಕಗಳು ಅಚ್ಚಿನ

ಮನೆಯಿಂದ ಹೊರಬಿದ್ದ ಕೂಡಲೇ ಜನರು ಆದರದಿಂದ ಕೊಂಡು ಓದುತ್ತಾರೆ. ಈ ಮಾಲೆಯಲ್ಲಿ ಈಗಾಗಲೇ ಭೌತವಿಜ್ಞಾನ, ರಸಾಯನವಿಜ್ಞಾನ, ಪ್ರಾಣಿವಿಜ್ಞಾನ, ವೈದ್ಯವಿಜ್ಞಾನ, ಗಣಿತ ವಿಜ್ಞಾನ, ಸಮಾಜ ವಿಜ್ಞಾನ, ಅರ್ಥಶಾಸ್ತ್ರ, ತತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ ಮುಂತಾದ ವಿಷಯಗಳನ್ನು ಕುರಿತ ಇನ್ನೂರ ಆರವತ್ತೈದು ಪುಸ್ತಕಗಳು ಪ್ರಕಟವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗಿದೆ.

ಈ ಮಾಲೆಯಲ್ಲಿ ಈಗ ಹೊರಬೀಳುತ್ತಿರುವ ಡಾ. ಆರ್.ವಿ. ಎಸ್. ಸುಂದರಂ ಅವರ "ದಿಗಂಬರ ಕವಿಗಳು" ಪುಸ್ತಕವು ಹೆಚ್ಚು ಜನಪ್ರಿಯವಾಗಲೆಂದು ನಾನು ಆಶಿಸುತ್ತೇನೆ.

ಪ್ರೊ. ಎಸ್. ಎನ್. ಹೆಗ್ಡೆ

ಕುಲಪತಿಗಳು

ಪ್ರಕಾಶಕರ ಪ್ರಸ್ತಾವನೆ

ನಮ್ಮ ಸಮಾಜವನ್ನು ಕಾಡುತ್ತಿರುವ ಭ್ರಷ್ಟತೆ, ಅಸಿಷ್ಟತೆ, ಅಸಮಾನತೆ, ಜಾತೀಯತೆ, ಅಜ್ಞಾನ, ಅಶಕ್ತತೆ ಇವೇ ಮೊದಲಾದ ಅಂಕುಡೊಂಕುಗಳನ್ನು ಧ್ವಂಸಮಾಡಿ ಬದುಕನ್ನು ನೇರ್ಪಡಿಸುವ ಘನ ಉದ್ದೇಶವನ್ನು ಇಟ್ಟುಕೊಂಡು ಸೃಷ್ಟಿಗೊಂಡುದುದೇ ದಿಗಂಬರ ಸಾಹಿತ್ಯ. ೧೯೬೫ರಲ್ಲಿ ಆರು ಜನ ತರುಣ ತೆಲುಗು ಕವಿಗಳು ದಿಗಂಬರ ಕವಿಗಳು ಎಂಬ ಹೆಸರಿನಲ್ಲಿ ಕವನ ಸಂಕಲನವೊಂದನ್ನು ಪ್ರಕಟಿಸಿದರು. ಈ ಕವನ ಸಂಕಲನದೊಂದಿಗೆ ತೆಲುಗು ಸಾಹಿತ್ಯ ಚರಿತ್ರೆಯಲ್ಲಿ ದಿಗಂಬರ ಕಾವ್ಯಕ್ಕೆ ನಾಂದಿಯಾಯಿತು. "ಈ ಪ್ರಪಂಚದ ಎಲ್ಲ ಅಪಾದನೆಗಳನ್ನು ತೊಲಗಿಸಿ ವಿಶ್ವಾಸ ಚೇತನ ಆತ್ಮ ಸ್ಫೂರ್ತಿಯಿಂದ ಬಾಳುವುದೇ ಗುರಿಯಾಗಿಟ್ಟುಕೊಂಡ ತರುಣರ ಗುಂಪೇ ದಿಗಂಬರ ಕವಿಗಳು. ಉಸಿರಾಡುವ ಪ್ರತಿಯೊಬ್ಬ ವ್ಯಕ್ತಿಯೊಂದಿಗೆ ತಾದಾತ್ಮ್ಯ ಪಡೆದು ವ್ಯಕ್ತಿಯ ಅಸ್ತಿತ್ವದ ಪರಿರಕ್ಷಣೆಗಾಗಿ ಸಮಾಜದಲ್ಲಿ ತುಂಬಾ ಅಸಂತೋಷವನ್ನು ಅತೃಪ್ತಿಯನ್ನು ಅಕ್ಷರಗಳಲ್ಲಿ ವ್ಯಕ್ತೀಕರಿಸಲು ಹೊರಟವರೇ ಈ ದಿಗಂಬರ ಕವಿಗಳು."

ದಲಿತ ಬಂಡಾಯ ಕಾವ್ಯದ ಮೇಲೆ ದಿಗಂಬರ ಕಾವ್ಯದ ಪ್ರಭಾವವನ್ನು ಅಧಿಕೃತವಾಗಿ ಗುರುತಿಸಲು ಸಾಧ್ಯವಾಗುತ್ತದೆ. ಕನ್ನಡ ಮತ್ತು ತೆಲುಗು ಈ ಎರಡು ಕಾವ್ಯ ಮಾರ್ಗಗಳ ಧೋರಣೆಯಲ್ಲಿ ಹೆಚ್ಚಿನ ಬದಲಾವಣೆಗಳು ಇಲ್ಲದ್ದರಿಂದ ಹಾಗೂ ಈ ಎರಡು ಪಂಥಗಳ ಸ್ವರೂಪ ಒಂದೇ ಆಗಿರುವುದರಿಂದ ಪರಸ್ಪರ ಹೆಗಲ ಮೇಲೆ ಕೈಹಾಕಿ ನಡೆಯಲು ಸಾಧ್ಯವಾಗಿದೆ. ದಲಿತ ಬಂಡಾಯ ಕಾವ್ಯ, ದೇಶೀಕಾವ್ಯ ಪ್ರಭಾವಗಳಿಂದಲೇ ಹೆಚ್ಚು

ಪ್ರೇರಿತವಾಗಿವೆ ಎಂದು ಹೇಳಬಹುದು. ತೆಲುಗು ಮತ್ತು ಮರಾಠಿಯ ಹಲವಾರು ಕವಿತೆಗಳು ಸಂಕಲನಗಳು ಅನುವಾದ ಗೊಂಡು ಹೊರ ಬಂದಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ಈ ಭಾಷೆಯ ಕಾವ್ಯದ ಪ್ರಭಾವ ಎಷ್ಟರಮಟ್ಟಿಗೆ ಗಾಢವಾಗಿದೆ ಎಂದರೆ ಕೆಲ ಕನ್ನಡದ ಕವಿತೆಗಳು ಇವು ಸ್ವತಂತ್ರ ಕವಿತೆಗಳೋ ಅನುವಾದ ಕವಿತೆಗಳೋ ಎಂದು ಬಿಡಿಸಿ ಹೇಳಲಾಗದ ಸ್ವರೂಪ ದಲ್ಲಿ ಹಾಸು ಹೊಕ್ಕಿವೆ.

ಡಾ. ಆರ್ವಿಯಸ್ ಸುಂದರಂ ಅವರು ಕನ್ನಡದ ಸಂದರ್ಭದಲ್ಲಿ ತೆಲುಗು ಸಾಹಿತ್ಯದ ರೂವಾರಿಯಂತೆ ಕೆಲಸ ಮಾಡುತ್ತಿದ್ದಾರೆ. ಈ ಮೊದಲೇ ದಿಗಂಬರ ಕಾವ್ಯ ಎಂಬ ಕೃತಿಯನ್ನು ಅನುವಾದಿಸಿ ಕೊಟ್ಟಿದ್ದಾರೆ. ಈಗ ನಮ್ಮ ಅಪೇಕ್ಷೆಯ ಮೇರೆಗೆ ದಿಗಂಬರ ಕಾವ್ಯದ ಪ್ರೇರಣೆ, ಅದರ ಮುಖ್ಯ ಉದ್ದೇಶ, ಅದು ತೆಲುಗು ಸಾಹಿತ್ಯ ಕ್ಷೇತ್ರದ ಮೇಲೆ ಬೀರಿದ ಪರಿಣಾಮ ಇವೇ ಮೊದಲಾದ ವಿಷಯಗಳನ್ನು ಒಳಗೊಂಡಂತೆ ಉಪನ್ಯಾಸವನ್ನು ಮಂಡಿಸಿ ಪ್ರಬಂಧವನ್ನು ಪ್ರಕಟಿಸಲು ಒದಗಿಸಿದ್ದಾರೆ. ಇದು ಪುಟ್ಟ ಹೊತ್ತಿಗೆಯಾದರೂ ಹೆಚ್ಚಿನ ವಿವರಗಳನ್ನು ಒದಗಿಸಿಕೊಟ್ಟಿದ್ದಾರೆ. ದಿಗಂಬರ ಕಾವ್ಯದ ಜನಕರಾದ ಆರು ಜನ ತರುಣ ಕವಿಗಳ ಪರಿಚಯ ಕಾವ್ಯೋದ್ದೇಶ ಸಾರ್ಥಕತೆ ಬಗೆಗೆ ಸರಳವಾಗಿ ಚರ್ಚಿಸಿದ್ದಾರೆ. ನಗ್ನಮುನಿ ನಿಖಿಲೇಶ್ವರ್, ಜ್ವಾಲಾಮುಖಿ, ಚೆರಬಂಡರಾಜು, ಮಹಾಸ್ವಪ್ನ, ಭೈರವಯ್ಯ ಬರೆದ ದಿಗಂಬರ ಕಾವ್ಯದ ಬಗೆಗೆ ಆಳವಾಗಿ ಅಧ್ಯಯನ ಮಾಡಬಯಸುವವರಿಗೆ ಇದೊಂದು ಬಹಳ ಉಪಯುಕ್ತವಾದ ಕೃತಿ. ಸಾಹಿತ್ಯಾಸಕ್ತರು ಇದನ್ನು ಆದರದಿಂದ ಬರಮಾಡಿಕೊಳ್ಳುತ್ತಾರೆ ಎಂದು ಆಶಿಸುವೆ. ಅಧ್ಯಯನ ಶೀಲತೆಗೆ ಇಂಬುಕೊಡುವ ಇಂಥದೊಂದು ಉತ್ತಮ

ಕೃತಿಯನ್ನು ಪ್ರಸಾರಾಂಗದ ಮೂಲಕ ಪ್ರಕಟಿಸಲು ಅವಕಾಶ ಮಾಡಿಕೊಟ್ಟ ಡಾ. ಆರ್ವಿಯಸ್ ಸುಂದರಂ ಅವರಿಗೆ ನಮ್ಮ ವಂದನೆಗಳು.

ಪ್ರಸಾರಾಂಗದ ಕಾರ್ಯಚಟುವಟಿಕೆಗಳಿಗೆ ತುಂಬು ಹೃದಯದ ಪ್ರೋತ್ಸಾಹ ನೀಡುತ್ತಿರುವ ಕುಲಪತಿಗಳಾದ ಡಾ. ಎಸ್. ಎನ್. ಹೆಗ್ಡೆ ಅವರನ್ನು ಮತ್ತು ಕುಲಸಚಿವರಾದ ಡಾ. ವಿ. ಜಿ. ತಳವಾರ್ ಅವರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಅಂತೆಯೇ ವಿಶ್ವವಿದ್ಯಾನಿಲಯ ಮುದ್ರಣಾಲಯದ ನಿರ್ದೇಶಕರಾದ ಶ್ರೀ ಬಿ. ಎಸ್. ಸಿದ್ದೇಗೌಡ ಅವರು ಪ್ರಸಾರಾಂಗದ ಪುಸ್ತಕಗಳ ಮುದ್ರಣವನ್ನು ತುಂಬಾ ಮುತುವರ್ಜಿಯಿಂದ ನಿರ್ವಹಿಸಿ ಕೊಡುತ್ತಿದ್ದಾರೆ. ಅವರಿಗೂ ನನ್ನ ವಂದನೆಗಳು. ಪ್ರಸಾರಾಂಗದ ಪ್ರಕಟಣಾ ಕಾರ್ಯವನ್ನು ಶ್ರದ್ಧಾಸಕ್ತಿಯಿಂದ ನಿರ್ವಹಿಸುತ್ತಿರುವ ಉಪನಿರ್ದೇಶಕರಾದ ಶ್ರೀ ಡಿ. ಕೆ. ಈರೇಗೌಡ ಮತ್ತು ಬಳಗದವರಿಗೂ ನನ್ನ ವಂದನೆಗಳು.

ಡಾ. ಅರವಿಂದ ಮಾಲಗತ್ತಿ
ನಿರ್ದೇಶಕರು

ಅರಿಕೆ

ಆಧುನಿಕ ತೆಲುಗು ಕಾವ್ಯವನ್ನು ಅಧ್ಯಯನ ಮಾಡುವವರು ತಪ್ಪದೆ ಅವಲೋಕಿಸಬೇಕಾದ ಕಾವ್ಯ ಧೋರಣೆ ಎಂದರೆ ದಿಗಂಬರ ಕಾವ್ಯ. ಆರು ಜನ ಆಧುನಿಕ ಕವಿಗಳು ತಮ್ಮ ಹೆಸರುಗಳನ್ನು ಗೋಪ್ಯವಾಗಿಟ್ಟುಕೊಂಡು ಆಕರ್ಷಕ ಕಾವ್ಯ ನಾಮಗಳಿಂದ ಸಾಹಿತ್ಯ ಲೋಕದಲ್ಲಿ ಸಂಚಲನವನ್ನು ಉಂಟು ಮಾಡಿದರು. ಇದು ನಡೆದುದು ೧೯೬೫ರಲ್ಲಿ. ದಿಗಂಬರ ಕವಿಗಳು ಬರೆದ ಕಾವ್ಯ, ಅದನ್ನು ಅವರು ಪ್ರಕಟಪಡಿಸಿದ ರೀತಿ ತರುಣ ಪೀಳಿಗೆಯ ಮೇಲೆ ಅಪಾರ ಪ್ರಭಾವ ಬೀರಿದುವು. ದಿಗಂಬರ ಕಾವ್ಯದಲ್ಲಿ ಅಶ್ಲೀಲವೇ ಹೊರತು ಅಧ್ಯಯನ ಯೋಗ್ಯ ಕಾವ್ಯತ್ವವಿಲ್ಲ ಎಂದವರೂ ಇದ್ದಾರೆ. ಇದೇನೇ ಇರಲಿ, ದಿಗಂಬರ ಕಾವ್ಯ ಆಧುನಿಕ ತೆಲುಗು ಕಾವ್ಯ ಇತಿಹಾಸದ ಒಂದು ಭಾಗ ವಾಗಿಬಿಟ್ಟಿದೆ.

ಮಿತ್ರರಾದ ಕೆ. ನಾರಾಯಣಸ್ವಾಮಿ ಅವರೊಂದಿಗೆ ದಿಗಂಬರ ಕಾವ್ಯವನ್ನು ೧೯೭೦ರಲ್ಲಿ ಕನ್ನಡಿಗರಿಗೆ ಅನುವಾದ ರೂಪದಲ್ಲಿ ಪರಿಚಯಿಸಿದ ನನಗೆ, ಮತ್ತೊಮ್ಮೆ ಅದೇ ವಿಷಯದ ಬಗ್ಗೆ ಉಪನ್ಯಾಸ ನೀಡುವ ಅವಕಾಶ ಸಿಕ್ಕಿದೆ. ಈ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ಪ್ರಸಾರಾಂಗದ ನಿರ್ದೇಶಕರಿಗೆ ಕೃತಜ್ಞ ನಾಗಿದ್ದೇನೆ.

ಈ ಕಿರು ಪುಸ್ತಕದಲ್ಲಿ ದಿಗಂಬರ ಕಾವ್ಯದ ಸಮಗ್ರ ವಿಶ್ಲೇಷಣೆ ಯನ್ನು ಮಾಡಲು ಸಾಧ್ಯವಿಲ್ಲವೆಂಬುದು ನನಗೆ ಗೊತ್ತಿದೆ ಆರು ಜನ ದಿಗಂಬರ ಕವಿಗಳ ಮತ್ತು ಅವರ ರಚನೆಗಳ ಸ್ಥೂಲ ಚಿತ್ರವನ್ನು ಮಾತ್ರ ಇಲ್ಲಿ ಕೊಟ್ಟಿದ್ದೇನೆ. ಮೂರು ದಶಕಗಳ

ಹಿಂದೆ ಆಂಧ್ರದಲ್ಲಿ ಪ್ರಾರಂಭವಾಗಿ ಆನಂತರದ ಕ್ರಾಂತಿಕಾರಿ ಸಾಹಿತ್ಯಕ್ಕೆ ದಾರಿ ಮಾಡಿಕೊಟ್ಟ ಒಂದು ಕಾವ್ಯಧೋರಣೆಯನ್ನು ಕನ್ನಡಿಗರಿಗೆ ಪರಿಚಯಿಸುವ ಅವಕಾಶ ಸಿಕ್ಕಿದ್ದಕ್ಕೆ ನನಗೆ ಸಂತೋಷವೆನಿಸಿದೆ.

ಈ ಪುಸ್ತಕವನ್ನು ಮುದ್ರಿಸಿ ಕೊಟ್ಟ ವಿಶ್ವವಿದ್ಯಾನಿಲಯದ ಮುದ್ರಣಾಲಯದವರಿಗೆ ನನ್ನ ಕೃತಜ್ಞತೆಗಳು.

ಆರ್ವಿಯೆಸ್ ಸುಂದರಂ

ವಿಷಯ ಸೂಚಿ

ದಿಗಂಬರ ಕವಿಗಳು

ಭಾರತದಲ್ಲಿ 'ದಿಗಂಬರ' ಎಂಬುದು ಪ್ರಸಿದ್ಧ ಜೈನ ಸಂಪ್ರದಾಯ. ದಿಗಂಬರತ್ವ ಅಥವಾ ನಗ್ನತೆ ದೈಹಿಕವಾಗಿರಬಹುದು ಅಥವಾ ತಾತ್ತ್ವಿಕವಾಗಿರಬಹುದು. ಜೈನ ಸಂಪ್ರದಾಯದಲ್ಲಿ ಈ ಎರಡೂ ರೀತಿಯ ದಿಗಂಬರತ್ವ ಅಸ್ತಿತ್ವದಲ್ಲಿದೆ. ತೆಲುಗು ಸಾಹಿತ್ಯದ ಮಟ್ಟಿಗೆ ದಿಗಂಬರತ್ವಕ್ಕೆ ಸಾರ್ಥಕ ನಿದರ್ಶನವೆಂದರೆ ವೇಮನ. ಬಹುಶಃ ೧೫ನೆಯ ಶತಮಾನಕ್ಕೆ ಸೇರಿದ ಈ ಕವಿ ದಿಗಂಬರನಾಗಿಯೇ ಸಂಚರಿಸುತ್ತಿದ್ದನೆಂದು ಪ್ರತೀತಿ. ಅವನ ಪದ್ಯಗಳಲ್ಲೂ ಅಷ್ಟೇ ದಿಗಂಬರವಾಗಿ ಭಾವನೆಗಳು ಮೂಡಿಬಂದುವು. ಮೂಢಾಚಾರಗಳನ್ನು, ಅಸಮಾನತೆಗಳನ್ನು, ಮೂರ್ಖತನವನ್ನು ನಗ್ನವಾಗಿ ಟೀಕಿಸಿದ ಮೊದಲನೆಯ ತೆಲುಗು ಕವಿ ವೇಮನ.

೧೯೬೫ ಮೇ ೮ ರಂದು ಆಂಧ್ರಪ್ರದೇಶದ ರಾಜಧಾನಿ ಹೈದರಾಬಾದಿನಲ್ಲಿ ಆರುಜನ ತರುಣ ಕವಿಗಳು ದಿಗಂಬರ ಕವಿಗಳೆಂಬ ಹೆಸರಿನಲ್ಲಿ ಒಂದು ಕವನ ಸಂಕಲನವನ್ನು ಪ್ರಕಟಿಸಿದರು. ಇವರದು ದೈಹಿಕ ದಿಗಂಬರತ್ವವಲ್ಲ; ಮಾನಸಿಕ ದಿಗಂಬರತ್ವ. ಎಂದರೆ ಈ ಪ್ರಪಂಚದ ಎಲ್ಲ ಆಚ್ಛಾದನೆಗಳನ್ನು ತೊಲಗಿಸಿ ನಿತ್ಯಸಚೇತನ ಆತ್ಮಸ್ಫೂರ್ತಿಯಿಂದ ಬಾಳುವುದೇ ಗುರಿಯಾಗಿಟ್ಟುಕೊಂಡ ತರುಣರ ಗುಂಪೇ ದಿಗಂಬರ ಕವಿಗಳು. ಉಸಿರಾಡುವ ಪ್ರತಿಯೊಬ್ಬ ವ್ಯಕ್ತಿಯೊಂದಿಗೆ ತಾದಾತ್ಮ್ಯ ಪಡೆದು ವ್ಯಕ್ತಿಯ ಅಸ್ತಿತ್ವದ ಪರಿರಕ್ಷಣೆಗಾಗಿ ಸಮಾಜದಲ್ಲಿರುವ ಅಸಂತೋಷವನ್ನು, ಅತೃಪ್ತಿಯನ್ನು ಅಕ್ಷರಗಳಲ್ಲಿ ವ್ಯಕ್ತೀಕರಿಸಲು ಹೊರಟವರೇ ದಿಗಂಬರ ಕವಿಗಳು.

ದಿಗಂಬರ ಕಾವ್ಯದ ಪ್ರಕಟಣೆ ಅಪೂರ್ವ ರೀತಿಯಲ್ಲಿ ನಡೆಯಿತು. ದಿಗಂಬರ ಕವಿಗಳು ತಮ್ಮ ಹೆಸರುಗಳನ್ನು ಬಿಟ್ಟು, ಹೊಸ ತರಹದ ಹೆಸರುಗಳನ್ನಿಟ್ಟುಕೊಂಡರು. ನಗ್ನಮುನಿ (ಎಂ. ಎಚ್. ಕೇಶವ ರಾವ್), ನಿಖಿಲೇಶ್ವರ್ (ಯಾದವರೆಡ್ಡಿ), ಚೆರಬಂಡರಾಜು (ಬದ್ದಂ ಭಾಸ್ಕರರೆಡ್ಡಿ), ಮಹಾಸ್ವಪ್ನ (ಕಮ್ಮಿಶೆಟ್ಟಿ ವೆಂಕಟೇಶ್ವರ ರಾವ್), ಜ್ವಾಲಾಮುಖಿ (ವೀರರಾಘವಾಚಾರ್ಯುಲು) ಮತ್ತು ಭೈರವಯ್ಯ (ಮನಮೋಹನ ಸಹಾಯ್). ದಿಗಂಬರರಿಕೆ ನಗ್ನನಾಮ ಸಂವತ್ಸರ ಆಶಾ ಋತುವಿನಲ್ಲಿ ತಮ್ಮ ಕಾವ್ಯವನ್ನು ಪ್ರಕಟಿಸುತ್ತಿರುವುದಾಗಿ ಘೋಷಿಸಿದರು. ಅವರ ಕಾವ್ಯ ಹೈದರಾಬಾದಿನ ಅಬಿಡ್ಸ್ ವೃತ್ತದಲ್ಲಿ ನಾಂಪಲ್ಲಿ ಪಾಂಡು ಎಂಬ ರಿಕ್ಷಾ ತುಳಿಯುವ ದಲಿತನಿಂದ ಬಿಡುಗಡೆಯಾಯಿತು. ದಿಗಂಬರ ಕವಿಗಳು ತಮ್ಮ ಕವನಗಳನ್ನು 'ದಿಕ್'ಗಳೆಂದು ಕರೆಯ ಬೇಕೆಂದರು. ಅರಮನೆಗಳಲ್ಲಿ, ಅಕಾಡೆಮಿಗಳಲ್ಲಿ ಭೋಗವಸ್ತು ವಾಗಿ, ಕಾಲಕ್ಷೇಪ ವಿಷಯವಾಗಿ ಬಿದ್ದಿರುವ ಕಾವ್ಯವನ್ನು ಮುಕ್ತಗೊಳಿಸಿ ರಸ್ತೆಗೆ ಎಳೆದು ತಂದಿರುವುದಾಗಿ ದಿಗಂಬರ ಕವಿಗಳು ಘೋಷಿಸಿದರು. ಜಾತಿಮತಗಳ ಗುರುತುಗಳನ್ನು ಬಿಟ್ಟು ಕೆಚ್ಚೆದೆಯ ತರುಣ ಕವಿಗಳಿಗೆ ಪ್ರತೀಕವಾಗಿ ಹೊಸ ಹೆಸರುಗಳನ್ನು ಇಟ್ಟುಕೊಂಡಿರುವುದಾಗಿ ತಿಳಿಸಿದರು. ನಡು ರಾತ್ರಿ ಬದಲಾವಣೆಯ ಮತ್ತು ಶುಭೋದಯದ ಸಂಕೇತ. ನಡುರಾತ್ರಿಯಲ್ಲಿ, ನಡುಬೀದಿಯಲ್ಲಿ ಒಬ್ಬ ಅತಿ ಸಾಮಾನ್ಯ ವ್ಯಕ್ತಿ ಒಂದು ಕವನ ಸಂಕಲನವನ್ನು ಬಿಡುಗಡೆ ಮಾಡಿದ್ದು ಸಂಚಲ ನಾತ್ಮಕವೇ ಸರಿ.

ಧ್ಯೇಯೋದ್ದೇಶಗಳು

ಭಯದಿಂದ ತತ್ತರಿಸಿ, ದಾಸ್ಯತ್ವಕ್ಕೊಳಗಾಗಿ, ದುರ್ಭರವಾದ ಸಮಾಜವೆಂಬ ಕೊಳಚೆಗುಂಡಿಯಲ್ಲಿ ಬಿದ್ದಿರುವ ಜನಸಮೂಹಕ್ಕೆ ಹೊಸ ರಕ್ತವನ್ನು ಇಂಜೆಕ್ಟ್ ಮಾಡುವುದು ತಮ್ಮ ಉದ್ದೇಶ ವೆಂದು ದಿಗಂಬರ ಕವಿಗಳು ಪ್ರಕಟಿಸಿದರು. ಜನರ ಅವಿದ್ಯೆ, ಅಜ್ಞಾನ, ಅಶಕ್ತತೆಗಳ ಆಧಾರದಿಂದ ದೇಶವನ್ನು ಲೂಟಿ ಮಾಡಲು ಪಳಗಿದ ರಾಜಕಾರಣಿಗಳು ಮತ್ತು ಸಮಾಜದ ವಿವಿಧ ಶೋಷಕ ವರ್ಗದವರು ಪ್ರಜೆಗಳ ಮೇಲೆ ಹೇರುತ್ತಿರುವ ಕುಷ್ಠ ವ್ಯವಸ್ಥೆಯನ್ನು ವಿರೋಧಿಸಿ ಹಾಕಿದ ಕೇಕೆಗಳನ್ನು ಧೈರ್ಯವಾಗಿ, ಸ್ಥೈರ್ಯವಾಗಿ ಪುಟಗಳಲ್ಲಿ ಹಿಡಿದಿಡಲು ಯತ್ನಿಸಲಾಗಿದೆ ಎಂದು ದಿಗಂಬರ ಕವಿಗಳು ಹೇಳಿಕೊಂಡರು.

ದಿಗಂಬರ ಯುಗದೊಳಕ್ಕೆ ಪ್ರವೇಶಿಸಲು ಆಹ್ವಾನಿಸುತ್ತಾ ಈ ಕವಿಗಳು ಹೇಳಿದ ಮಾತುಗಳು ಗಮನಿಸತಕ್ಕವು:

> ಇದು ಸೆಕ್ಸ್ ಗ್ರಂಥವಲ್ಲ
> ಇದರಲ್ಲಿ ರಾಜಕೀಯ ಘೋಷಣೆಗಳಿಲ್ಲ.

"ಇಲ್ಲಿ, ಈ ದೇಶದಲ್ಲಿ, ಈ ಪ್ರಪಂಚದಲ್ಲಿ ಉಸಿರಾಡುವ ಪ್ರತಿ ಮಾನವನ ಅಸ್ತಿತ್ವಕ್ಕಾಗಿ ತಾಪದಿಂದ ಆತನ ಭವಿಷ್ಯವನ್ನು ಚಿಂತಿಸಿ ಬಿಕ್ಕಿ ಬಿಕ್ಕಿ ಅತ್ತು ಹುಚ್ಚೆದ್ದು ಪ್ರವಚಿಸಿದ ಕಾವ್ಯವಿದು. ಈ ಕಾವ್ಯವನ್ನು ಓದಿದ ತಕ್ಷಣ ಗೇಲಿ ಮಾಡಬಹುದು. ಅಸಹ್ಯ ಪಡಬಹುದು. ಪ್ರಾಚೀನ ಕಾಲದಲ್ಲೇ ನಿಜವಾದ ಕಾವ್ಯ ನಿಂತು ಹೋಯಿತೆಂದು ಅಭಿಪ್ರಾಯಪಡಬಹುದು. ಸವೆದು, ಕೊಳೆತು ದುರ್ನಾತ ಬೀರುತ್ತಿರುವ ಮಾತುಗಳನ್ನು ಸಮಾಸಗಳನ್ನು, ಭಾವಗಳನ್ನು, ಹಿಡಿದು ನೇತಾಡುತ್ತಿರುವ ಜನರಿಗಾಗಿ ಈ ನಾಲ್ಕು ಮಾತುಗಳು."

ಹೀಗೆ ದಿಗಂಬರ ಕವಿಗಳು ತಮ್ಮ ಕಾವ್ಯ ಯಾವ ಉದ್ದೇ ದಿಂದ ಹೊರಬರುತ್ತಿದೆ ಎಂಬುದನ್ನು ಹೇಳಲು ಯತ್ನಿಸಿದರು "ಒಳ್ಳೆಯದಕ್ಕಾಗಿ, ಮನುಷ್ಯನಲ್ಲಿರುವ ಕೆಂಡದಂತಹ ನಿಜವಾ ಮನುಷ್ಯನಿಗಾಗಿ, ಕಪಟವಿಲ್ಲದೆ ಕಿರುನಗೆ ಬೀರುತ್ತಿರು ಸಮಾಜಕ್ಕಾಗಿ ಹಗಲಿರುಳು ಆರದ ಅಗ್ನಿಯಲ್ಲಿ ನಡೆದ ಆತ್ಮಗಳ ಸುರಿಸುತ್ತಿರುವ ಕಾವ್ಯವಿದು" ಎಂದು ಸ್ಪಷ್ಟಪಡಿಸಿದರು. ಸಮ ಕಾಲೀನ ಜೀವನದ ಬಗ್ಗೆ ತಮ್ಮ ದೃಷ್ಟಿ ಎಂತಹದೆಂಬುದನ್ನು ವಿವರಿಸಿದರು.

ದಿಗಂಬರ ಕಾವ್ಯ ಸಂಕಲನಗಳಲ್ಲಿ (೧೯೬೪, ೧೯೬೬ ಮತ್ತು ೧೯೬೮ ಪ್ರಕಟವಾದ ಮೂರು ಸಂಕಲನಗಳು) ಪ್ರಕಟವಾ ಅಭಿಪ್ರಾಯಗಳನ್ನು ಕ್ರೋಢೀಕರಿಸಿದಾಗ ಈ ಕವಿಗಳು ಸಾಹಿತ್ಯ ದಲ್ಲಿ ಮತ್ತು ರಾಜಕೀಯದಲ್ಲಿ ಮೂಲಭೂತ ಬದಲಾವಣೆಗಳನ್ನು ಕೋರುತ್ತಿರುವುದು ಸ್ಪಷ್ಟವಾಗುತ್ತದೆ.

ಸಾಹಿತ್ಯರಂಗದಲ್ಲಿ ಕೆಲಸಕ್ಕೆ ಬಾರದ ಟನ್ನುಗಟ್ಟಲೆ ರಚನೆಗಳ ಉತ್ಪತ್ತಿಯಾಗುತ್ತಿವೆ ಎಂಬುದು ಇವರ ಅಭಿಪ್ರಾಯ. ಸಾಂಪ್ರ ದಾಯಿಕ ಮೌಲ್ಯಗಳು, ಮಿಥ್ಯಾಚಾರಗಳು, ಸಂಸ್ಕೃತ ಸಮಾಸ ಗಳು, ಶೃಂಗಾರ ಸನ್ನಿವೇಶಗಳು ಮುಂತಾದವನ್ನು ಕಸದ ತೊಟ್ಟಿಗೆ ಎಸೆಯುವ ಸಾಹಿತ್ಯ ಬೇಕು. ಜೀವನದಲ್ಲಿ ಪ್ರಾಮಾಣಿ ಕತೆಯನ್ನು, ಸರಳತೆಯನ್ನು, ಅನುಭವಗಳ ಅಭಿವ್ಯಕ್ತಿಯನ್ನು ತಿಳಿಯಪಡಿಸುವ ಸಾಹಿತ್ಯ ಬೇಕೆಂದು ಈ ಕವಿಗಳ ಅಭಿಪ್ರಾಯ.

ದುಷ್ಟ ರಾಜಕೀಯ ದಿಗಂಬರ ಕವಿಗಳ ತೀವ್ರ ವಿಮರ್ಶೆ ಪಾತ್ರವಾಯಿತು. ಜಾತಿ ಮತವರ್ಣಗಳ ಕೊಳಚೆಗುಂಡಿಯಲ್ಲಿ ಬಿದ್ದು ಹುಳುಗಳಂತೆ ಹೊರಳಾಡುವ ರಾಜಕಾರಣಿಗಳು ರಾಜಕೀಯ ಪ್ರಯೋಜನಗಳನ್ನು ಆಶಿಸುತ್ತಾ ಅಧಿಕಾರವಾ

...ಂದ ನರಳುವ ಮಠಾಧಿಪತಿಗಳು, ಸ್ವರ್ಗಕ್ಕೆ ಅಡ್ಡದಾರಿ ...ೋರಿಸುತ್ತೇನೆಂದು ಅಡ್ಡಬೀಳಿಸಿಕೊಂಡು ಜನರನ್ನು ವಂಚಿಸುವ ...ೋಟಾ ಸನ್ಯಾಸಿಗಳು ದಿಗಂಬರ ಕವಿಗಳ ಟೀಕೆಗೆ ಗುರಿ ...ಯಾದರು.

ಸಮಾಜದಲ್ಲಿ ದುರ್ಗಂಧ ಸಂಸ್ಕೃತಿಯನ್ನು ಹರಡುತ್ತಿರುವವರ ...ಟ್ಟಿಯೊಂದನ್ನು ದಿಗಂಬರ ಕವಿಗಳು ತಯಾರಿಸಿ ಅಂತಹವರ ...ರುದ್ಧ ತರುಣರ ರಕ್ತವನ್ನು ಉಕ್ಕಿಸುವುದೇ ತಮ್ಮ ಗುರಿ ...ಂದು ಘೋಷಿಸಿದರು.

1. ಜನರ ಅಗತ್ಯಗಳನ್ನು ಗಮನಿಸದೆ ರಾಜಕೀಯ ಕೊಳಚೆಯಲ್ಲಿ ಹೊರಳಾಡುವ ಗುಂಪು ಕ್ರಿಮಿಗಳು, ತೊದಲು ಭಾಷಣ ಮಾಡುವ ಮೆದುಳಿಲ್ಲದ ರಾಜಕಾರಣಿಗಳು.
2. ಮತದ ಹೆಸರಿನಲ್ಲಿ ಅಜ್ಞಾನವನ್ನು ಹರಡುತ್ತಿರುವ ಮಠಾಧಿಪತಿಗಳು.
3. ಜನರ ಬೆವರಿನ ಹಣದಿಂದ ಕಲೆಯ ಹೆಸರಿನಲ್ಲಿ ತೊಗಲು ವ್ಯಾಪಾರ ಮಾಡುತ್ತಾ ಅಂಗಾಂಗ ಪ್ರದರ್ಶಿಸುವ ಸಿನೆಮಾ ತಾರೆಯರು.
4. ಸಿನೆಮಾ ತಾರೆಯರ ಮುಖಚಿತ್ರಗಳಿಂದ ಪ್ರತಿ ವಾರ ಕಸವನ್ನು ದೇಶದ ಮೇಲೆ ಸುರಿಸುತ್ತಿರುವ ಪತ್ರಿಕೆಗಳು, ಪತ್ರಿಕಾಧಿಪತಿಗಳು.
5. ರಾಜಕಾರಣಿಗಳಿಗಾಗಿ, ಪತ್ರಿಕಾಧಿಪತಿಗಳಿಗಾಗಿ ಆತ್ಮಗೌರವವನ್ನು ಮಾರಿಕೊಂಡು ಸುಳ್ಳುಗಳನ್ನು ಬರೆಯುವ ಲೇಖಕರು.

ಇಂತಹವರು ಸೃಷ್ಟಿಸುತ್ತಿರುವ ವಿಷ ವಲಯಗಳನ್ನು, ಇವರು ...ಳೆಸಿ ಪೋಷಿಸುತ್ತಿರುವ ಕುವ್ಯವಸ್ಥೆಯನ್ನು, ದುರ್ಗಂಧ

ಸಂಸ್ಕೃತಿಯನ್ನು ನಾಶಮಾಡುವುದೇ ತಮ್ಮ ಗುರಿಯೆಂದು, ಜವಾಬ್ದಾರಿಯನ್ನು ಮರೆತ ಮಾನವರನ್ನು ಎಚ್ಚರಿಸುವುದೇ ತಮ್ಮ ಉದ್ದೇಶವೆಂದು ದಿಗಂಬರ ಕವಿಗಳು ಸಾರಿದರು.

'ದಿಗಂಬರಿ' ಎಂಬ ಕವನದಲ್ಲಿ 'ದಿಗಂಬರ ಸತ್ಯಗಳು ನಿತ್ಯವೂ ಉರಿಯುವ ಯಥಾರ್ಥಗಳು' ಎಂದು ಹೇಳುತ್ತಾ ಭೈರವಯ್ಯ ಹೇಳಿದ ಮಾತುಗಳಲ್ಲಿ ಈ ಕವಿಗಳ ಧ್ಯೇಯೋದ್ದೇಶಗಳು ಪ್ರವಚನ ರೂಪದಲ್ಲಿ ಮೂಡಿಬಂದಿವೆ :

ನೋಡಿ
ಧಗಧಗನೆ ಉರಿಯುತ್ತಿರುವ ಕೆಂಡಗಳನ್ನು
ನಿಮ್ಮ ಸುಳ್ಳುಗಳನ್ನು
ನಿಮ್ಮದೆಂದುಕೊಂಡದ್ದನ್ನು
ನರಿಯಂಥ ಕುರಿಯಂಥ ನಾಯಿಮರಿಯಂಥ ಬದುಕನ್ನು
ಸೂರ್ಯನ ನೈಜಕಿರಣಗಳನ್ನು ಸಹಿಸಲಾಗದ ಗೂಬೆ
ಗಳನ್ನು
ಹೊಂಚು ಹಾಕುತ್ತಿರುವ ಚಿರತೆಗಳನ್ನು
ಕದ್ದು ಮೇಲೆರಗುವ ತೋಳಗಳನ್ನು
ಗಾಜಿನಂತೆ ಚೂರುಚೂರಾದ ನಿಮ್ಮ ಜೀವನವನ್ನು
ನಿಮ್ಮ ಸುತ್ತ ವಿಶ್ವರೂಪ ಧರಿಸಿದ ಸತ್ಯವನ್ನು.

ತೆಲುಗು ಸಾಹಿತ್ಯದ ಹಿನ್ನೆಲೆ

ಆಧುನಿಕ ತೆಲುಗು ಕಾವ್ಯ ೧೯೧೦ರಲ್ಲಿ ಪ್ರಾರಂಭ ವಾಯಿತು. ಗುರಜಾಡ ಅಪ್ಪಾರಾವ್ ಮುತ್ಯಾಲಸರ ಎಂಬ ಹೊಸಛಂದಸ್ಸಿನಲ್ಲಿ ಹೊಸ ವಸ್ತುಗಳನ್ನು ಆವಿಷ್ಕರಿಸಿದರು. ಮಹಾಕಾವ್ಯ ಪರಂಪರೆಗೆ ಮುಕ್ತಾಯ ಹೇಳಿ ಖಂಡಕಾವ್ಯ ಮತ್ತು ಚಿಡಿಕವನ ಎಂಬ ಪ್ರಕಾರಗಳನ್ನು ಜಾರಿಗೆ ತಂದರು. ಗುರಜಾಡ ಅಪ್ಪಾರಾವ್ ಬರೆದ ಗೀತೆಗಳು ತೆಲುಗಿನ ನವೋದಯ

ಕಾವ್ಯಕ್ಕೆ ನಾಂದಿ ಹಾಡಿದುವು. ೧೯೩೦ರ ತನಕ ತೆಲುಗಿನ ನವೋದಯ ಕಾವ್ಯ ಭಾವಕಾವ್ಯವೆಂಬ ಹೆಸರಿನಲ್ಲಿ ಪ್ರಚಾರವಾಯಿತು. ರಾಯಪ್ರೋಲು ಸುಬ್ಬಾರಾವ್, ದೇವುಲಪಲ್ಲಿ ಕೃಷ್ಣಶಾಸ್ತ್ರಿ, ನಂಡೂರಿ ಸುಬ್ಬಾರಾವ್ ಮುಂತಾದವರು ತೆಲುಗಿನ ಭಾವಗೀತೆಗಳ ಸಾಹಿತ್ಯಕ್ಕೆ ಮಹತ್ತ್ವದ ಕೊಡುಗೆಯನ್ನು ನೀಡಿದರು.

೧೯೩೦ರಿಂದ ಪ್ರಗತಿಶೀಲ ಸಾಹಿತ್ಯ ನೆಲೆಯೂರಿತು. 'ಅಭ್ಯುದಯ ಸಾಹಿತ್ಯ'ವೆಂದು ಹೆಸರು ಪಡೆದ ಈ ಪಂಥದ ನೇತಾರರು ಶ್ರೀ ಶ್ರೀ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀರಂಗಂ ಶ್ರೀನಿವಾಸರಾವ್. ಇವರು 'ನಡೆಯಿರಿ ಮುಂದಕೆ ನಡೆಯಿರಿ ಮುಂದಕೆ ಹೊಸ ಪ್ರಪಂಚವು! ಕರೆಯುತಿದೆ' ಎಂದು ಜನರನ್ನು ಮುನ್ನಡೆಸುತ್ತಾ 'ಮಹಾಪ್ರಸ್ಥಾನ'ವೆಂಬ ಗೀತೆಯನ್ನೂ ಮತ್ತಿತರ ಕವನಗಳನ್ನೂ ಬರೆದರು (೧೯೩೦-೪೦). ೧೯೪೩ರಲ್ಲಿ ಪ್ರಗತಿಶೀಲ ಲೇಖಕರ ಮೊದಲ ಸಮ್ಮೇಳನ ನಡೆಯಿತು. ಆ ಕಾಲಕ್ಕೆ ಶ್ರೀ ಶ್ರೀಯವರು ಹಲವು ಗೀತೆಗಳನ್ನು ಬರೆದರಲ್ಲದೆ ಆ ಕಾಲದ ಎಲ್ಲ ತರುಣ ಕವಿಗಳ ಮೇಲೂ ಪ್ರಭಾವ ಬೀರಿದರು.

ಶ್ರೀ ಶ್ರೀ ತೆಲುಗು ಕಾವ್ಯಕ್ಕೆ ಹೊಸ ಆಯಾಮವನ್ನು ನೀಡಿದವರು, ಸಮಾಜವಾದದ ಸಿದ್ಧಾಂತಗಳನ್ನು ಕಾವ್ಯರೂಪದಲ್ಲಿ ಸಶಕ್ತವಾಗಿ ನಿರೂಪಿಸಿದವರು. ಛಂದೋವ್ಯಾಕರಣಗಳ ಸಂಕೋಲೆಗಳಿಂದ ಬಿಡುಗಡೆ ಪಡೆದು ಹೊಸ ವಸ್ತುಗಳನ್ನು, ಲಯಗಳನ್ನು ಸ್ವೀಕರಿಸಬೇಕೆಂದು ಘೋಷಿಸಿದವರು.

ಶ್ರೀ ಶ್ರೀ ಅವರು ಪ್ರಗತಿಶೀಲ ಕಾವ್ಯವನ್ನು ಬರೆಯುತ್ತಿದ್ದ ಕಾಲದಲ್ಲೇ ಕೆಲವರು ನವ್ಯಕಾವ್ಯಕ್ಕೆ ತೊಡಗಿದರು. ಪಠಾಭಿ ('ಸಂಸ್ಕಾರ' ಚಲನಚಿತ್ರದ ನಿರ್ದೇಶಕ ಪಟ್ಟಾಭಿರಾಮಿರೆಡ್ಡಿ),

ನಾರಾಯಣಬಾಬು ಮುಂತಾದವರು ವಚನ ಪದ್ಯಗಳಲ್ಲಿ ನವ್ಯತೆಯನ್ನು ತಂದರು. 'ಪಿಟೀಲು ರಾಗಗಳ ಡಜನ್' (ಫಿಡೇಲು ರಾಗಲ ಡಜನ್) ಕೃತಿಯಲ್ಲಿ ಪಠಾಭಿ ಅತಿನವ್ಯ ಧೋರಣೆಗಳನ್ನು ಪ್ರದರ್ಶಿಸಿದರು. 'ನಾನು ಭಾವಕವಿ ಅಲ್ಲ; ಅಭಾವ ಕವಿ' ಎಂದು ಹೇಳಿ 'ನನ್ನ ಕಣ್ಣಿನಲ್ಲಿ ಟೆಲಿಸ್ಕೋಪುಗಳು ಮೈಕ್ರೊಸ್ಕೋಪುಗಳು ಇರುತ್ತವೆ' ಎಂದು ಪ್ರಕಟಿಸಿದರು. 'ವಚನ ಪದ್ಯಗಳೆಂಬ ದೊಣ್ಣೆಗಳಿಂದ ಪದ್ಯದ ಸೊಂಟ ಮುರಿಯುತ್ತೇನೆ' ಎಂದು ಪ್ರತಿಜ್ಞೆ ಮಾಡಿದರು.

೧೯೪೪ರ ಹೊತ್ತಿಗೆ ಶ್ರೀಶ್ರೀಯವರ ಪ್ರಗತಿಪರ ಧೋರಣೆಗಳನ್ನು ಬೆಂಬಲಿಸುವ ಅನೇಕ ಕವಿಗಳು ತೆಲುಗು ಕವನ ಸಂಕಲನಗಳನ್ನು ಪ್ರಕಟಿಸಲಾರಂಭಿಸಿದರು. ದಾಶರಥಿ ಎಂಬ ಕವಿಯ 'ರುದ್ರವೀಣ', 'ಅಗ್ನಿಧಾರ', ಸೋಮಸುಂದರ್ ಬರೆದ 'ವಜ್ರಾಯುಧಂ', ಅನಿಸೆಟ್ಟಿಯ 'ಅಗ್ನಿವೀಣ' ಮುಂತಾದವನ್ನು ಇಲ್ಲಿ ಸ್ಮರಿಸಬಹುದು. ಕುಂದುರ್ತಿ ಆಂಜನೇಯುಲು ವಚನ ಪದ್ಯವನ್ನೇ ಬಳಸಿ 'ತೆಲಂಗಾಣ' ಎಂಬ ದೀರ್ಘಕಾವ್ಯವನ್ನು ಬರೆದರು.

ಆಂಧ್ರದ ಪ್ರಗತಿಶೀಲ ಲೇಖಕರ ಸಂಘದ ಕಾರ್ಯಕಲಾಪಗಳು ೧೯೪೮ರಿಂದ ನಿಸ್ತೇಜವಾಗುತ್ತಾ ಬಂದುವು. 'ಅಭ್ಯುದಯ' ಎಂಬ ಹೆಸರಿನ ಪತ್ರಿಕೆ ನಿಂತು ಹೋಯಿತು. ೧೯೫೫ರಲ್ಲಿ ಸಂಘವನ್ನು ಮತ್ತೆ ಪುನರ್ಜೀವನಗೊಳಿಸಲು ಪ್ರಯತ್ನಗಳು ನಡೆದುವು. ಶ್ರೀ ಶ್ರೀ ಅವರ ಅಧ್ಯಕ್ಷತೆಯಲ್ಲಿ ಹೊಸ ಕಾರ್ಯನಿರ್ವಾಹಕ ಸಮಿತಿ ಏರ್ಪಟ್ಟಿತು. ಆದರೂ ಪ್ರಗತಿಶೀಲ ಲೇಖಕರ ಸಂಘ ಛಿದ್ರವಾಯಿತು. ಲೇಖಕರಲ್ಲಿ ಕೆಲವರು ಚಲನಚಿತ್ರರಂಗಕ್ಕೆ, ಕೆಲವರು ಆಕಾಶವಾಣಿಗೆ ಸೇರಿ ಸೃಜನಶೀಲ ಬರವಣಿಗೆಯನ್ನು ಉಪೇಕ್ಷಿಸಿದರು. ೧೯೬೫ರ ಹೊತ್ತಿಗೆ ದಿಗಂಬರ

ಕವಿಗಳ ಆವಿರ್ಭಾವಕ್ಕೆ ತಕ್ಕ ಪರಿಸ್ಥಿತಿಗಳು ಉಂಟಾದುವು. ಸ್ವಾತಂತ್ರ್ಯದ ಕನಸುಗಳೆಲ್ಲ ಭಗ್ನವಾದುವು. ನಿರುದ್ಯೋಗ, ಭ್ರಷ್ಟಾಚಾರ, ದಾರಿದ್ರ್ಯ ತರುಣರಲ್ಲಿ ಅಸಹನೆಯನ್ನೂ ಅಶಾಂತಿಯನ್ನೂ ಹೆಚ್ಚಿಸಿದುವು. ದಿಗಂಬರ ಕವಿಗಳಲ್ಲೇ ಕೆಲವರು ಈ ಅಶಾಂತಿಯನ್ನು ದಿಗಂಬರ ಕಾವ್ಯಕ್ಕೆ ಮೊದಲೇ ವ್ಯಕ್ತಪಡಿಸಿದ್ದರು. ಕೇಶವರಾವ್ (ನಗ್ನಮುನಿ) 'ಉದಯಿಂಚನಿ ಉದಯಾಲು' (ಉದಯಿಸದ ಉದಯಗಳು) ಎಂಬ ಕವನದಲ್ಲಿ ಹೀಗೆ ಬರೆದರು.

ರಾತ್ರಿ ಊರು ನಿದ್ದೆ ಮಾಡಿದ ಮೇಲೆ
ಅವರವರ ನೋವುಗಳ ಗೂಡಿಕೆಯೊಳಗೆ
ಬಂಧಿಸಿದ ಮೇಲೆ
ನಾವು ನಾಲ್ಕು ಜನ ನಾಲ್ಕು ದಿಕ್ಕುಗಳಿಂದ ಬಂದು
ಕಾಫಿ ಹೌಸಲ್ಲಿ ಭೇಟಿಯಾಗಿ
ಅನುಭವಗೀತೆಗಳನ್ನು ಹಂಚಿಕೊಳ್ಳುತ್ತೇವೆ
ಕೋಪದಿಂದ ಗಾಳಿಯನ್ನು ಬಿಸಿಮಾಡುತ್ತಾ
ಕಣ್ಣೀರಿಂದ ಶಿಲೆಗಳನ್ನು ಕರಗಿಸುತ್ತಾ.

'ಕೋಪದಿಂದ ಗಾಳಿಯನ್ನು ಬಿಸಿ ಮಾಡುವ' ನಗ್ನಮುನಿ ದಿಗಂಬರ ಕಾವ್ಯಘೋಷಣೆಯ ಚೈತನ್ಯಸ್ಫೂರ್ತಿಯಾದರು. ಕಮ್ಮಿಸೆಟ್ಟಿ ವೆಂಕಟೇಶ್ವರರಾವ್ (ಮಹಾಸ್ವಪ್ನ) 'ಇಸುಕ ಎಡಾರಿ' (ಮರಳುಗಾಡು) ಎಂಬ ಕವನದಲ್ಲಿ—

ಕಾಲವೆಂದು ಕೊನೆ ಮೊದಲಿಲ್ಲದ ಮರುಭೂಮಿ
ಇದು ಉಪ್ಪು ನೀರು ಕಾಲಿರುವ ಒಂಟೆಗಳ ದಾರಿ
ಈ ಲೋಕ ಕೆಲವರಿಗೆ ಮಾತ್ರ ಹೆದ್ದಾರಿ—ಎಂದರು.

ಹೀಗೆ ೧೯೬೫ರ ವೇಳೆಗೆ ತರುಣ ಕವಿಗಳಲ್ಲಿ ಪ್ರಗತಿಶೀಲ ಚಳವಳಿಯ ಸ್ತಬ್ಧತೆ, ಸ್ವಾತಂತ್ರ್ಯದ ಭ್ರಮನಿರಸನ,

ನಿರುದ್ಯೋಗ, ಭ್ರಷ್ಟಾಚಾರ ಮುಂತಾದವು ಅಶಾಂತಿಯನ್ನು ಉಂಟುಮಾಡಿದ ಪರಿಣಾಮವಾಗಿ ದಿಗಂಬರಕಾವ್ಯ ಅವತರಿಸಿತು.

ಪಾಶ್ಚಾತ್ಯ ಸಾಹಿತ್ಯದ ಹಿನ್ನೆಲೆ

ದಿಗಂಬರ ಕಾವ್ಯದ ಧ್ಯೇಯೋದ್ದೇಶಗಳ ಮೇಲೆ ಫ್ಯೂಚರಿಸಂನ ಪ್ರಭಾವ ಪ್ರಧಾನವಾಗಿದೆ. ೧೯೦೯ರಲ್ಲಿ ಇಟಲಿಯಲ್ಲಿ ಮ್ಯಾರಿನೆಟ್ಟಿ ಎಂಬ ಲೇಖಕನ ಮುಖಂಡತ್ವದಲ್ಲಿ ಫ್ಯೂಚರಿಸ್ಟ್ ಮ್ಯಾನಿಫೆಸ್ಟೊ ಪ್ರಕಟವಾಯಿತು. ಈ ಧ್ಯೇಯ ಪತ್ರದ ಅನೇಕ ವಾಕ್ಯಗಳನ್ನು ದಿಗಂಬರ ಕವಿಗಳು ತಮ್ಮ ಉದ್ದೇಶ ಪ್ರಕಟಣೆಯಲ್ಲಿ ಬಳಸಿಕೊಂಡರು. ಮುಖ್ಯವಾಗಿ ಚಿತ್ರ ಕಲೆಗೆ ಅನ್ವಯವಾದ ಫ್ಯೂಚರಿಸಂ ಅನಂತರದ ಕಾಲದಲ್ಲಿ ಬೇರೆ ಕಲೆಗಳಿಗೂ ವಿಸ್ತರಿಸಿತು. ಹಳೆಯ ಕಲಾಕೃತಿಗಳನ್ನು ನೋಡಿ ಸಂತೋಷಪಡುವುದು ಹೆಣಕ್ಕೆ ಮಾನ್ಯತೆ ನೀಡುವಂಥ ದೆಂದೂ ಹಳೆಯ ಇತಿಹಾಸವನ್ನು ತಿಳಿದುಕೊಳ್ಳುವುದು ವಿಷ ಕುಡಿಯುವುದಕ್ಕೆ ಸಮಾನವೆಂದೂ ಫ್ಯೂಚರಿಸ್ಟ್‌ಗಳು ಪ್ರಕಟಿಸಿದರು. ಗ್ರಂಥಾಲಯಗಳಲ್ಲಿರುವ ಪುಸ್ತಕಗಳಿಗೆ ಬೆಂಕಿ ಯಿಡಬೇಕೆಂದೂ ಹಳೆಯ ಕಲಾಕೃತಿಗಳೆಲ್ಲವನ್ನು ಧ್ವಂಸ ಮಾಡಬೇಕೆಂದೂ ಇವರು ಅಭಿಪ್ರಾಯಪಟ್ಟರು. ಶಿಥಿಲಗಳಿಂದ ಹೊಸ ಸೃಷ್ಟಿಯಾಗುತ್ತವೆಂದರು. ಚಲನಚಿತ್ರಗಳಿಂದ, ಪತ್ರಿಕಾ ವರದಿಗಳಿಂದ, ಯಂತ್ರಗಳಿಂದ ವಸ್ತುಗಳನ್ನು ಸ್ವೀಕರಿಸಬೇಕೆಂದು ಸಲಹೆ ಕೊಟ್ಟರು. ಇವರ ದೃಷ್ಟಿಯಲ್ಲಿ ಧ್ವನಿಗಳೇ ಸಂಗೀತ, ಮಾತುಗಳೇ ಕಾವ್ಯ, ಬಣ್ಣಗಳೇ ಶಿಲ್ಪ.

ಫ್ಯೂಚರಿಸಂನಂತೆ ಪ್ರಪಂಚ ಸಾಹಿತ್ಯದಲ್ಲಿ ಇನ್ನೂ ಕೆಲವು ಪ್ರತಿಭಟನೆಯ ಚಳವಳಿಗಳು ನಡೆದುವು. ದಿಗಂಬರ ಕವಿಗಳ

ಮೇಲೆ ಇಂತಹ ಅನೇಕ ಧೋರಣೆಗಳು ಪ್ರಭಾವ ಬೀರಿವೆ. ಅವುಗಳಲ್ಲಿ ಡಾಡಾಯಿಸಂ ಒಂದು. ಪ್ರಥಮ ಪ್ರಪಂಚ ಸಂಗ್ರಾಮದ ಪರಿಣಾಮಗಳು ಕೆಲವು ತರುಣ ಕಲಾವಿದರಲ್ಲಿ ಅಸಹನೆಯನ್ನುಂಟು ಮಾಡಿದುವು. ೧೯೧೬ರಲ್ಲಿ ಟ್ರಿಸ್ಟನ್ ಜಾರಾ ಎಂಬವರ ನೇತೃತ್ವದಲ್ಲಿ ಈ ಚಳವಳಿ ಪ್ರಾರಂಭವಾಯಿತು. ಈ ಚಳವಳಿಗೆ ಹೆಸರಿಡುವ ಸಲುವಾಗಿ ನಿಘಂಟುವೊಂದನ್ನು ಕೈಗೆತ್ತಿಕೊಂಡು ಕಣ್ಣುಮುಚ್ಚಿ ಬೆರಳಿಟ್ಟಾಗ ಕಾಣಿಸಿದ 'ಡಾಡಾ' ಎಂಬ ಪದವನ್ನೇ ಸ್ವೀಕರಿಸಲಾಯಿತು. ಅರ್ಥರಹಿತವಾದ, ವಿನಾಶಕಾರಿಯಾದ ಚಟುವಟಿಕೆಗಳಲ್ಲೇ ಅರ್ಥ ಹುಡುಕುವ ಸಿದ್ಧಾಂತ ಇವರದು. 'ನಿಘಂಟುವಿಗಿಂತ ಶ್ರೇಷ್ಠ ಕಲಾಕೃತಿ ಇನ್ನೊಂದಿಲ್ಲ' ಎಂಬುದು ಇವರ ಹೇಳಿಕೆ. 'ಮಾನವಕುಲದ ಮುಖದ ಮೇಲೆ ಉಗಿಯುತ್ತೇವೆ. ಎಲ್ಲ ತರ್ಕಗಳಿಗೆ ಡಾಡಾ ವಿರೋಧಿ. ನಾಶಮಾಡಬೇಕಾದುದು ಈ ಪ್ರಪಂಚದಲ್ಲಿ ಬೇಕಾದಷ್ಟಿದೆ. ಎಲ್ಲವನ್ನೂ ಗುಡಿಸಿ ಶುಭ್ರ ಮಾಡಬೇಕು' ಎಂದರು ಡಾಡಾಯಿಸ್ಟ್‌ಗಳು. ೧೯೧೮ರಲ್ಲಿ ಡಾಡಾಯಿಸ್ಟ್ ಧ್ಯೇಯಪತ್ರ ಪ್ರಕಟವಾಯಿತು. ಈ ವಿಧ್ವಂಸಕಾರಿ ಧೋರಣೆ ಸುಮಾರು ಮೂರು ವರ್ಷಗಳಲ್ಲೇ ಕಳೆಗುಂದಿತು.

ಪ್ರಪಂಚ ಸಾಹಿತ್ಯದ ಮೇಲೆ ಪ್ರಭಾವಬೀರಿದ ಇನ್ನೊಂದು ವಾದ ಸರ್ರಿಯಲಿಸಂ. ೧೯೨೪ರಲ್ಲಿ ಆಂಡ್ರಿಬ್ರೆಟನ್‌ನ ಮುಖಂಡತ್ವದಲ್ಲಿ ಸರ್ರಿಯಲಿಸಂ ಧ್ಯೇಯಪತ್ರ ಪ್ರಕಟವಾಯಿತು. ಫ್ರಾಯ್ಡನ ಮನೋವಿಶ್ಲೇಷಣಾ ಸಿದ್ಧಾಂತ ಇದರ ಪ್ರೇರಕಶಕ್ತಿ. ಸುಪ್ತಪ್ರಜ್ಞೆಯನ್ನು ಸೃಜನಶಕ್ತಿಯಾಗಿ ಮಾರ್ಪಡಿಸುವ ಕಾರ್ಯವನ್ನು ಇವರು ಕೈಗೊಂಡರು. ಹಳೆಯದನ್ನು

ತಿರಸ್ಕರಿಸಲು ವ್ಯಂಗ್ಯ, ಟೀಕೆ, ಅಪಹಾಸ್ಯಗಳನ್ನು ಬಳಸಿಕೊಂಡರು. ಚಿತ್ರಕಲೆಯಲ್ಲಿ ಪ್ರಾರಂಭವಾದ ಸರ್ರಿಯಲಿಸಂ ಕಾವ್ಯಕ್ಕೂ ಅನ್ವಯವಾಯಿತು.

ಈ ಶತಮಾನದ ಐವತ್ತನೆಯ ದಶಕದಲ್ಲಿ ಅಮೇರಿಕೆಯಲ್ಲಿ ಪ್ರಾರಂಭವಾದ ಬೀಟ್ನಿಕ್ ಸಂಸ್ಕೃತಿಯ ಪ್ರಭಾವವು ಜಗತ್ತಿನ ತರುಣರ ಮೇಲೆ ತಕ್ಕಮಟ್ಟಿಗೆ ಆಗಿದೆ. ಯಾಂತ್ರಿಕ ನಾಗರಿಕತೆಯಿಂದಾದ ಅತೃಪ್ತಿ, ಮಹಾಯುದ್ಧಗಳಿಂದಾದ ಯುದ್ಧದ್ವೇಷ, ಮಾರಕಾಸ್ತ್ರಗಳ ಬಗೆಗಿನ ಭಯ ಇತ್ಯಾದಿಗಳ ಪರಿಣಾಮವೇ ಬೀಟ್ನಿಕ್ಸ್. ಸ್ಯಾನ್ ಫ್ರಾನ್ಸಿಸ್ಕೋದಲ್ಲಿರುವ ಸ್ಟೇಟ್ ಕಾಲೇಜಿನಲ್ಲಿ ೧೯೫೪ರಲ್ಲಿ 'ಪ್ರೊಯೆಟ್ರಿ ಸೆಂಟರ್' ಪ್ರಾರಂಭವಾಯಿತು. ಅಲ್ಲಿ ಎಲ್ಲ ತರಹದ ಕವಿಗಳೂ ಬಂದು ತಮ್ಮ ಕಾವ್ಯವನ್ನು ಓದುತ್ತಿದ್ದರು. ಗಿನ್ಸ್‌ಬರ್ಗ್ ಎಂಬ ಕವಿ ಓದಿದ 'ಹೌಲ್' ಎಂಬ ಕವನ ಸಂಚಲನ ಉಂಟುಮಾಡಿತು. ಒಮ್ಮೆ ಲಾಸ್ ಎಂಜಲೀಸ್‌ನಲ್ಲಿ ಗಿನ್ಸ್‌ಬರ್ಗ್ ತನ್ನ ಕವನ ಓದುವಾಗ 'ನಗ್ನತೆ' ಎಂಬ ಪದವನ್ನು ಬಳಸಿದ. ಶ್ರೋತೃಗಳಲ್ಲಿ ಒಬ್ಬ 'ನಗ್ನತೆ ಎಂದರೇನು' ಎಂದು ಪ್ರಶ್ನಿಸಿದ. ಗಿನ್ಸ್‌ಬರ್ಗ್ ಸ್ವಲ್ಪಹೊತ್ತು ಯೋಚನೆ ಮಾಡಿ ಬಟ್ಟೆಗಳನ್ನು ಬಿಚ್ಚಿ 'ನಗ್ನತೆ ಎಂದರೆ ಇದು' ಎಂದು ಉತ್ತರಕೊಟ್ಟ. ಅಮೆರಿಕೆಯ ಸ್ವೇಚ್ಛಾಚಾರ ಜೀವನವನ್ನು, ಸುಳ್ಳು ಪ್ರತಿಷ್ಠೆಯನ್ನು ಪ್ರಶ್ನಿಸುತ್ತಾ ಗಿನ್ಸ್‌ಬರ್ಗ್ 'ಅಮೆರಿಕಾ! ನೀನು ಮಾನವ ಯುದ್ಧಗಳನ್ನು ಎಂದು ಕೊನೆಗೊಳಿಸುವೆ ಅಮೆರಿಕಾ! ಎಂದು ನೀನು ನಿನ್ನ ಬಟ್ಟೆಗಳನ್ನು ಬಿಚ್ಚುವೆ' ಎಂದ. ಬೀಟ್ನಿಕ್‌ಗಳಿಗೆ ಜಾಜ್ ಸಂಗೀತ ಎಂದರೆ ಇಷ್ಟ. ಸ್ವೇಚ್ಛಾಜೀವನ, ಲೈಂಗಿಕ ಸ್ವಾತಂತ್ರ್ಯ, ಯಾಂತ್ರಿಕ ನಾಗರಿ

ಕತೆಯ ಬಗ್ಗೆ ಅನುಮಾನ, ಸಮಕಾಲೀನ ವಾಸ್ತವಿಕತೆಯ ಬಗ್ಗೆ ಆಸಕ್ತಿ ಇವು ಇವರ ಲಕ್ಷಣಗಳು.

ಭಾರತೀಯ ಸಾಹಿತ್ಯದ ಹಿನ್ನೆಲೆ

ಹಿಂದಿಯಲ್ಲಿ ಛಾಯಾವಾದ್ ಎಂಬುದು ರಮ್ಯಕಾವ್ಯ ಘೋಷಣೆಯಾಗಿದ್ದು ಅದರ ಪ್ರತಿಕ್ರಿಯೆಯಾಗಿ ನಯೀ ಕವಿತಾ ಎಂಬ ಹೆಸರಿನಲ್ಲಿ ನವ್ಯಕಾವ್ಯ ಉದಯಿಸಿತು. ಇದು ಪ್ರಯೋಗಶೀಲ ಮತ್ತು ಪ್ರಗತಿಶೀಲ ಧೋರಣೆಗಳೊಂದಿಗೆ ತಾದಾತ್ಮ್ಯ ಪಡೆದು ಹೊಸ ಹಿಂದೀ ಕಾವ್ಯವನ್ನು ಸೃಷ್ಟಿಸಿತು. ಅಜ್ಞೇಯ್, ಧರ್ಮವೀರ್ ಮುಂತಾದವರು ಹಿಂದೀ ಸಾಹಿತ್ಯಕ್ಕೆ ತಿರುವನ್ನು ಕೊಟ್ಟರು. ನಕೇನ್‌ವಾದದ ಕವಿಗಳು (ನಲಿನ್ ವಿಲೋಚನ್, ಕೇಸರೀ ನಾರಾಯಣ್, ನರೇಶ್) ತಮ್ಮ ಹೆಸರುಗಳ ಮೊದಲ ಅಕ್ಷರಗಳನ್ನೇ ಸ್ವೀಕರಿಸಿ ಕವನ ಸಂಕಲನ ಪ್ರಕಟಿಸಿದರು. ಅಕವಿತಾ ಚಳವಳಿ ಜಗದೀಶ್ ಚತುರ್ವೇದಿ ಮುಂತಾದವರಿಂದ ಚಾಲನೆಗೆ ಬಂದಿತು.

ಬಂಗಾಳದ ಹಸಿವು ತಲೆಮಾರಿನ ಚಳವಳಿ ಗಮನಿಸತಕ್ಕದ್ದು. ಮಲಯ್‌ರಾಯ್ ಚೌಧರಿ, ದೇವಿರಾಯ್, ಉತ್ಪಲ್‌ಕುಮಾರ್ ಬಸು, ವಾಸುದೇವದಾಸ್ ಮುಂತಾದವರು ಈ ಚಳವಳಿಯ ಪ್ರಮುಖರು. ೧೯೬೪ರಲ್ಲಿ ಈ ತರುಣರು ಸಾವಿರಾರು ಮುಖವಾಡಗಳನ್ನು ತಯಾರಿಸಿ ಅವನ್ನು ಅಂಚೆ ಮೂಲಕ ಭಾರತದ ಅನೇಕ ಪ್ರದೇಶಗಳಿಗೆ ಸೇರಿದ ಲೇಖಕರಿಗೆ, ಕಲಾವಿದರಿಗೆ, ಆಡಳಿತಗಾರರಿಗೆ, ಶಿಕ್ಷಣತಜ್ಞರಿಗೆ ಕಳುಹಿಸಿದರು. ಎಲ್ಲರೂ ತಮ್ಮ ತಮ್ಮ ಮುಖವಾಡಗಳನ್ನು ತೊಲಗಿಸಿ ನೈಜಮುಖಗಳನ್ನು ತೋರಿಸಬೇಕೆಂದು ಇವರು ಸೂಚಿಸಿದರು.

ಹಸಿವು ತಲೆಮಾರಿನ ೨೬ ಜನ ತರುಣರನ್ನು ೧೯೬೪ರಲ್ಲಿ ಅಶ್ಲೀಲ ಸಾಹಿತ್ಯ ಸೃಷ್ಟಿಸಿದರೆಂಬ ಆಪಾದನೆಯ ಮೇರೆಗೆ ಸೆರೆಮನೆಗೆ ಹಾಕಲಾಯಿತು. ದೇಶದ ಅಸಂಖ್ಯಾತ ಮೇಧಾವಿಗಳು ಇದನ್ನು ಖಂಡಿಸಿದರು. ಸಾಹಿತ್ಯದಲ್ಲಿ ಅಶ್ಲೀಲದ ಬಗ್ಗೆ ಚರ್ಚಿಸುವ ಅಧಿಕಾರ ಸಾಹಿತಿಗಳಿಗೇ ಹೊರತು ಸರ್ಕಾರಕ್ಕಿಲ್ಲ ಎಂದು ಈ ಕವಿಗಳು ವಾದಿಸಿದರು.

ದಿಗಂಬರ ಕಾವ್ಯದ ಆವಿರ್ಭಾವ

ದಿಗಂಬರ ಕವಿಗಳ ಮೊದಲನೆಯ ಸಂಕಲನ ೧೯೬೫ರಲ್ಲಿ ಪ್ರಕಟವಾದಾಗ ಅದರ ಆವಿರ್ಭಾವಕ್ಕೆ ತಕ್ಕ ಪರಿಸ್ಥಿತಿಗಳು ಭಾರತದಲ್ಲಿ ಮತ್ತು ಪ್ರಪಂಚದಲ್ಲಿದ್ದುವೆಂಬುದು ಸ್ಪಷ್ಟ. ಎರಡು ಮಹಾಯುದ್ಧಗಳು ಉಳಿಸಿದ ಅಶಾಂತಿ, ತರುಣರಲ್ಲಿ ಭವಿಷ್ಯತ್ತಿನ ಬಗ್ಗೆ ಹೆಚ್ಚುತ್ತಿದ್ದ ಅಶಾಂತಿ, ಕ್ಷುದ್ರ ರಾಜಕೀಯಗಳು ಸಮಾಜಕ್ಕೆ ಉಂಟು ಮಾಡುತ್ತಿದ್ದ ಹಾನಿ, ಸಾಹಿತಿಗಳ ಸ್ತಬ್ಧತೆ ಮತ್ತು ಅಪ್ರಾಮಾಣಿಕತೆ ಯುವಜನಾಂಗದಲ್ಲಿ ಅತೃಪ್ತಿಗೆ ಕಾರಣವಾದುವು. ಆಂಧ್ರಪ್ರದೇಶ ರೂಪುಗೊಳ್ಳುವ ಮೊದಲು ತೆಲುಗರಿಗೆ ಮಹಾನಗರವೆಂಬುದಿರಲಿಲ್ಲ. ಮದರಾಸು ತಮ್ಮದೇ ಎಂದು ಭಾವಿಸಿ ಅದನ್ನು ಸಾಹಿತ್ಯ ಹಾಗೂ ಸಂಸ್ಕೃತಿಯ ಕೇಂದ್ರವನ್ನಾಗಿ ಮಾಡಿಕೊಂಡಿದ್ದ ತೆಲುಗರು ಆ ಮಹಾನಗರವನ್ನು ತಮಿಳರಿಗೆ ಬಿಟ್ಟುಕೊಡಬೇಕಾಯಿತು. ಹೈದರಾಬಾದ್ ತೆಲಂಗಾಣದ ಮುಖ್ಯ ಕೇಂದ್ರವಾದರೂ ಮೊದಲಿನಿಂದ ಅಲ್ಲಿ ತೆಲುಗರು ಪರಕೀಯರಾಗಿ ಬಾಳುವ ಸ್ಥಿತಿ ಇತ್ತು. ೧೯೫೬ರಲ್ಲಿ ಆಂಧ್ರಪ್ರದೇಶ ರೂಪುಗೊಂಡ ಅನಂತರ ಎಲ್ಲ ಜಿಲ್ಲೆಗಳಿಂದ ಅನೇಕ ಕುಟುಂಬಗಳು ಜೀವನಕ್ಕಾಗಿ

ದರಾಬಾದಿಗೆ ವಲಸೆ ಬಂದುವು. ಸಾಹಿತ್ಯ ಚೈತನ್ಯ ತರುಣ ಲ್ಲಿ ಮೆಲ್ಲನೆ ಹರಡತೊಡಗಿತು. ಪ್ರಮುಖ ಪ್ರಗತಿಶೀಲಕವಿ ಬಂದುರ್ತಿ ಆಂಜನೇಯುಲು ಹೈದರಾಬಾದಿನಲ್ಲಿ 'ಫ್ರೀವರ್ಸ್ ಫ್ರಂಟ್' ಎಂಬುದನ್ನು ಸ್ಥಾಪಿಸಿ ಆಧುನಿಕ ತೆಲುಗು ಕಾವ್ಯದ ವ್ಯಾಪ್ತಿಗೆ ಶ್ರಮಿಸಿದರು. ಆದರೆ ವಚನ ಪದ್ಯಗಳು ಕಾವ್ಯದ ಗ್ಗೆಯಾಗಲಿ ಸಮಾಜದ ಬಗ್ಗೆಯಾಗಲಿ ಜನರಲ್ಲಿ ತೀನಕೆ ಮೂಡಿಸುವಲ್ಲಿ ಸಫಲವಾಗಿಲ್ಲ. ಇಂತಹ ನಿದ್ರಾವಸ್ಥೆಯನ್ನು ಮುರಿಯಲು ದಿಗಂಬರ ಕವಿಗಳು ಗದ್ದಲದ ಮಾರ್ಗವನ್ನು ರಿಸಿಕೊಂಡರು.

ಒಂದು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿರುವ ಲುಗು ಸಾಹಿತ್ಯವನ್ನು ತಿರಸ್ಕರಿಸಿ ಹೊಸ ಮಾರ್ಗವನ್ನು ಡಿಯುವುದು ಸುಲಭದ ಕೆಲಸವಲ್ಲ. ಸ್ತಬ್ಧತೆಯನ್ನು ಲಗಿಸಬೇಕಾದರೆ 'ಷಾಕ್ ಟ್ರೀಟ್‌ಮೆಂಟ್' ಒಂದೇ ಾರ್ಗ ಎಂದು ದಿಗಂಬರ ಕವಿಗಳು ಭಾವಿಸಿದರು. ಕಾವ್ಯ ನ್ನು ಮುದ್ರಿಸುವಲ್ಲಿ, ಬಿಡುಗಡೆ ಮಾಡುವುದರಲ್ಲಿ, ಹೊಸ ಸರುಗಳಿಂದ ಪರಿಚಯವಾಗುವುದರಲ್ಲಿ ಯುವಪೀಳಿಗೆಯನ್ನು ನ್ಮತ್ತ ಸೆಳೆಯುವುದೇ ಈ ಕವಿಗಳ ಉದ್ದೇಶವಾಗಿತ್ತು. ವರಲ್ಲಿ ಕೇಶವರಾವ್ (ನಗ್ನ ಮುನಿ), ಯಾದವರೆಡ್ಡಿ ಖಿಲೇಶ್ವರ್), ಕಮ್ಮಿಶೆಟ್ಟಿ ವೆಂಕಟೇಶ್ವರರಾವ್ (ಮಹಾಸ್ವಪ್ನ) ಗಂಬರಕವಿಗಳಾಗಿ ಅವತರಿಸುವ ಮುಂಚೆಯೇ ಕವಿಗಳಾಗಿ ಸಿದ್ಧರಾಗಿದ್ದರು. ದಿಗಂಬರ ಕವಿಗಳ ಸಂಕಲನ ಪ್ರಕಟವಾಗು ದಕ್ಕೆ ಒಂದು ವರ್ಷದ ಹಿಂದೆ (೧೯೬೪) 'ರಾತ್ರಿ' ಎಂಬ ವನ ಸಂಕಲನ ಪ್ರಕಟವಾಯಿತು. ಅದರಲ್ಲಿ ಮೇಲಿನ ಮೂವರ ವನಗಳು ಸ್ಥಾನ ಪಡೆದಿವೆ. ಕೇಶವರಾವ್ ೧೯೬೧ರಲ್ಲೇ

'ಉದಯಿಂಚನಿ ಉದಯಾಲು' ಎಂಬ ಕವನ ಸಂಕಲನ ಪ್ರಕಟಿಸಿದರು. ಅದರಲ್ಲೇ 'ಮೇಲೆ ಬೀಳುವವರ ಮೇಲೆ ತಿರುಗಿ ಬೀಳುವುದೂ ಒಮ್ಮೊಮ್ಮೆ ಅಗತ್ಯ' ಎಂದು ತಮ್ಮ ಪ್ರತಿಭಟನೆಯ ಧೋರಣೆಯನ್ನು ಅವರು ವ್ಯಕ್ತಪಡಿಸಿದರು. 'ಜೀವನಕ್ಕೆ ನಿರ್ದಿಷ್ಟ ವ್ಯಾಖ್ಯೆ ಬೇಡ ಬೊಗಸೆಯಲ್ಲಿ ತುಂಬಿಸಲ್ಪಟ್ಟ ಈ ಜೀವನವನ್ನು ಗಟಗಟನೆ ಕುಡಿಯಲು ಬಿಡು' ಎಂದರವರು.

ಕಮ್ಮಿಶೆಟ್ಟಿ ವೆಂಕಟೇಶ್ವರರಾವ್ 'ಕಾಲವೆಂಬುದು ಆದ್ಯಂತಗಳಿಲ್ಲದ ಮರುಭೂಮಿ' ಎಂದು ಘೋಷಿಸಿದ್ದರು. 'ಅಗ್ನಿ ಶಿಖಲು – ಮಂಚುಜಡುಲು' (ಅಗ್ನಿಜ್ವಾಲೆ – ಮಂಜಿನಮಳೆ) ಎಂಬ ಕವನ ಸಂಕಲನವನ್ನು ಪ್ರಕಟಿಸಿದ್ದರು. ಮಾನವನ ಅಸಹಾಯಕತೆ, ಸತ್ತ್ವಹೀನತೆ ಇವರಲ್ಲಿ ಅಶಾಂತಿಯನ್ನು ಮೂಡಿಸಿತ್ತು.

> ಯಾವುದೋ ಅಜ್ಞಾತ ಮಹಾಶಕ್ತಿ ನಟನೆ ಮಾಡುತ್ತಿದೆ
> ಈ ಮಾನವ ಶಕ್ತಿಗಳ ಮೇಲೆ ಗೆಲುವು ಪಡೆಯುತ್ತಿವೆ
> ಕಾಣಿಸದ ಬಿರುಗಾಳಿ ಯಾವುದೋ ಬೀಸುತ್ತಿದೆ
> ದೀನಹೀನ ಗಳವೆತ್ತಿ
> ದೀಪಗಳು ಅಳುತ್ತಿವೆ.

ದಿಗಂಬರ ಕಾವ್ಯ

ಆರು ಜನ ಸೇರಿ ಪ್ರಕಟಿಸಿದ ದಿಗಂಬರ ಕಾವ್ಯದಲ್ಲಿ ಏಕಸೂತ್ರತೆಯನ್ನು ಕಾಣುವುದು ಕಷ್ಟ. ಹೊಸಕಾವ್ಯವನ್ನು ತೀವ್ರ ಪದಜಾಲದಿಂದ ಮೂಡಿಸಬೇಕೆಂಬುವದರಲ್ಲಿ, ಸಮಾಜದಲ್ಲಿ, ಸಾಹಿತ್ಯದಲ್ಲಿ, ರಾಜಕೀಯದಲ್ಲಿ ಬದಲಾವಣೆ ತರಬೇಕೆಂಬುವದರಲ್ಲಿ ಆರು ಜನರಿಗೂ ಏಕಾಭಿಪ್ರಾಯವಿತ್ತೆಂಬುವದರಲ್ಲಿ ಸಂದೇಹವಿಲ್ಲ.

ಆದರೆ ಇವರಿಗೆ ತಮ್ಮದೇ ಆದ ವ್ಯಕ್ತಿತ್ವವಿದೆ, ಶೈಲಿ ಇದೆ, ಅಭಿವ್ಯಕ್ತಿಯ ಧೋರಣೆ ಇದೆ. ಇವರಲ್ಲಿ ಕೆಲವರು ದಿಗಂಬರ ಕಾವ್ಯದ ಪ್ರಕಟಣೆಯ ಅನಂತರವೂ ತಮ್ಮದೇ ಆದ ರೀತಿಯಲ್ಲಿ ಕಾವ್ಯರಚನೆಯನ್ನು ಮುಂದುವರಿಸಿದರು.

ನಗ್ನಮುನಿ

೧೯೩೯ರಲ್ಲಿ ತೆನಾಲಿ ಹತ್ತಿರದ ಒಂದು ಹಳ್ಳಿಯಲ್ಲಿ ಕಣ್ಣು ತೆರೆದು ಹೈದರಾಬಾದಿನ ಧೂಳಿನಲ್ಲಿ ಕಸದಲ್ಲಿ ಓದಿ ಬೆಳೆದವರು. ಬೀದಿಯ ಕೆಳಗಿಂದ ನಡೆದುಹೋಗುವ ಮನುಷ್ಯರು, ಸೈಗಲ್ ಕಂಠದ ವಿಷಾದ, ನಡುರಾತ್ರಿ ೧೨ ಗಂಟೆಯ ಗಡಿಯಾರದ ಮುಳ್ಳಿನ ನೋಟ ಇಷ್ಟು. ಭೂವಲಯದ ಮೇಲೆ ಈ ಸಮಸ್ಯೆಗಳ ಚಿಂದಿ ಬಟ್ಟೆಗಳ ನಡುವೆ ಮಗುವಾಗಿ ಉಸಿರಾಡುವುದೇ ಒಂದು ಅನುಭವ ಎನ್ನುತ್ತಾರೆ. ದಿಗಂಬರ ಕವಿಗಳನ್ನು ಒಟ್ಟುಗೂಡಿಸಿ, ಧ್ಯೇಯಪತ್ರವನ್ನು ತಯಾರಿಸಿ, ಪ್ರಚೋದನೆ ನೀಡುವಲ್ಲಿ ನಗ್ನಮುನಿಯ ಪಾತ್ರ ಮಹತ್ವದ್ದು.

ದಿಗಂಬರ ಕವಿಗಳ ಮೂರು ಸಂಕಲನಗಳಲ್ಲಿ ನಗ್ನಮುನಿ ಬರೆದ ಕವನಗಳು ಜನವಿರೋಧಿಗಳ ಬಗ್ಗೆ ದ್ವೇಷ, ನರಸತ್ತ ಜನರ ಮೇಲೆ ಆಕ್ರೋಶ, ಶಾಂತಿಮಂತ್ರ ಪಠಿಸುವವರ ಬಗ್ಗೆ ಅಸಹನೆ ಕಟುವಾದ, ಹರಿತವಾದ ಪದಗಳಿಂದ ಮೂಡಿಬಂದಿವೆ. 'ಸುಖರೋಗಿ' ಎಂಬ ಕವನದಲ್ಲಿ—

ಡಿಯರ್ ಸ್ಕೌಂಡ್ರಲ್
ನಾಲ್ಕು ಗೋಡೆಗಳ ನಡುವೆ ಒಳ್ಳೆತನ ಹೂತಿಟ್ಟು
ಕಣ್ಣೀರನ್ನು ಗುಲಾಬಿಗಳಿಗೆ ಗೊಬ್ಬರವಾಗಿ ಬಳಸಿ
ಹಚ್ಚನೆ ಹಸುಗೂಸುತನ ಬೆಚ್ಚನೆ ಯೌವನ
ಸುರಂತಗಳಲ್ಲಿ ಕಳೆದುಕೊಂಡು

ದುರಂತ ನಾಯಕನಂತೆ
ಮೇಲೆತ್ತುವ ಹರವೆಯಂತೆ ಪಕಪಕ ನಗುತ್ತಿರುವ
ನಿನ್ನ ಕಂಡರೆ ಕಹಿಕರ—ಎನ್ನುತ್ತಾರೆ.

ದಿಗಂಬರತ್ವ ಎಂಬುದು ಆತ್ಮವಂಚನೆಯಾಗಿರಬಾರದು. ಆತ್ಮದ ಆವಿಷ್ಕಾರ ಮಾಡುವಂತಿರಬೇಕು. ನಗ್ನಮುನಿ ತಮ್ಮ 'ಸುಖರೋಗಿ' ಕವನದಲ್ಲಿ ಇದನ್ನೇ ಸ್ಪಷ್ಟಪಡಿಸುತ್ತಾರೆ.

ಏಳು ಎದ್ದೇಳು
ಮುಸುಕು ತೆಗಿ
ದುರ್ಗಂಧ ಬೀರುವ ಈ ಬಟ್ಟೆಗಳನ್ನು ಬಿಚ್ಚಿ
ಆತ್ಮದ ಮುಂದೆ ನಿಂತು ನಿನ್ನ ಹೀನು ನೋಡಿಕೋ
ಮನುಷ್ಯನಂತೆ ಒಳ್ಳೆಯವನಾಗಿ
ಆಕಾಶದಂತೆ ಅವನಿಯಂತೆ
ಬಾಳು

ದಿಗಂಬರ ಕವಿಗಳ ಮೇಲಿರುವ ಮುಖ್ಯ ಆಪಾದನೆ ಅಶ್ಲೀಲತೆ. ಇದು ಆರು ಜನ ಕವಿಗಳಿಗೂ ಅನ್ವಯಿಸುತ್ತದೆ. ಅಸಭ್ಯ ಮತ್ತು ಅಶ್ಲೀಲ ಪದಗಳಿಲ್ಲದೆ ಬರೆಯುವ ಶಕ್ತಿ ಎಲ್ಲ ದಿಗಂಬರ ಕವಿಗಳಿಗೂ ಇತ್ತೆಂಬುದು ಸ್ಪಷ್ಟ. ಆದರೆ ಬೇಕೆಂದೇ ಅವರು ಬೈಗುಳಗಳನ್ನು ಅಸಭ್ಯ ಪದಗಳನ್ನು ಬಳಸಿದರು. ಕೊಳಚೆ ಗುಂಡಿಯಲ್ಲಿರುವ ದುರ್ಗಂಧವನ್ನು ವರ್ಣಿಸಲು ಸಭ್ಯ ಪದಗಳು ಶಕ್ತವಾಗಿರುವುದಿಲ್ಲ ವೆಂದು ಅವರು ಸ್ಪಷ್ಟಪಡಿಸಿದರು.

'ಕಾಸ್ಮಿಕ್ ಜನಕ್ಕಾಗಿ' ಎಂಬ ಹೆಸರಿನಲ್ಲಿ ನಗ್ನಮುನಿ ಬರೆ ಕವನದಲ್ಲಿ 'ಕೋಳಿ ಪಂದ್ಯಗಳಿಗಾಗಿ ಕುರಿ ಪಂದ್ಯಗಳಿಗಾಗಿ ಕುತ್ತಿ ಗಳನ್ನು ಕೊಯ್ದುಕೊಳ್ಳುವ ಆಂಧ್ರ ದೇಶವನ್ನು ಗೇಲಿ ಮಾ ದ್ದಾರೆ. 'ಅಖಂಡಾಂಧ್ರ ದೇಶ ಅಜ್ಞಾನಾಂಧ ಸೌಭಾಗ್ಯ ಸಿ ಎಂದು ಪ್ರಕಟಿಸಿದರು. 'ಯೋಜನೆಗಳ ವ್ರಣಗಳ ಮೇ

…ತ್ತ್ವದ ರಾಜಕೀಯ ಸೋಗುಗಳನ್ನು' ಟೀಕಿಸಿದರು. ಕವನ …ಯುತ್ತಾ ಹೋದಂತೆ ಕವಿಯ ಆಕ್ರೋಶ, ಆವೇಶಗಳು …ಗೇರಿದಂತೆ ಕಾಣಿಸುತ್ತದೆ.

ಕವಿ ಹಂದಿಗಳನ್ನು
ಅಗಾಧಮಿಗಳೆಂಬ ಅನಾಥಾಲಯಗಳನ್ನು
ನಿನ್ನ ಊರೂರುಗಳ ಸೂಳೆಗೇರಿಗಳಲ್ಲಿ
ಅರಳಿದ ಮುಂಜಾನೆಗಳನ್ನು
ಶತಶತಮಾನಗಳ ಬಂಜೆ ಸಂಸ್ಕೃತಿಯನ್ನು
ಎಲ್ಲಾದರೂ ಎಂತಾದರೂ ಹೇಗಾದರೂ
ಕಾದವಲ್ಲಿ ಹೊರಳಾಡಿಸಿದ ಬಯಕೆಗಳಿಂದ
ಹಾಡು ಹಗಲೇ
ಸಂಭೋಗಿಸಬೇಕೆನಿಸುತ್ತೆ.

ನಗ್ನಮುನಿಯ ಕವನಗಳನ್ನು ಗಮನಿಸಿದಾಗ ಕೋಪ …ಂದೇ ಅವರ ಕಾವ್ಯದ ಬೆನ್ನೆಲುಬೆಂದು ಭಾವಿಸಬಾರದು. ಆ …ಕೋಪದ ಹಿಂದೆ ಶೋಷಿತ ಜನರ ಬಗ್ಗೆ ಅನುಕಂಪವಿದೆ. ಸಮಾಜ …ತುಕರ ದೌರ್ಜನ್ಯಕ್ಕೆ ಬಲಿಯಾದ ಸಾಮಾನ್ಯ ಜನರ ಬಗ್ಗೆ …ಂಕವಿದೆ. ಮಾನವನ ಮೂರ್ಖತನವನ್ನು, ಎರಡು …ಹಾಯುದ್ಧಗಳ ಬೂದಿಯನ್ನು, ಅಜ್ಞಾನವನ್ನು, ಆಕ್ರಂದನ …ನ್ನು ಬಚ್ಚಿಟ್ಟಿರುವ ಹೃದಯದ ಕಡೆ ಯಾರೂ ಬರಬೇಡಿರೆಂದು …ಮುನಿ ಒಂದು ಕವನದಲ್ಲಿ ಬೇಡಿಕೊಳ್ಳುತ್ತಾರೆ (ಮಾ). …ಂಬರಾಕ್ಷರ ಅಶ್ಲೀಲವೆಂದು ಹೇಳಿದವರನ್ನು ನೆನಪಿಸಿಕೊಂಡಾಗ …ತ್ರ ನಗ್ನಮುನಿ ಕೆಂಡಕಾರುತ್ತಾರೆ. ಅಂಥವರನ್ನು …ಂಸಕರೆಂದು ಹೀಯಾಳಿಸುತ್ತಾರೆ. 'ನಿನ್ನ ಚರ್ಮ ಕೊಳೆತು …ಗಿದೆ. ನಿನ್ನ ಕಣ್ಣುಗಳಿಗೆ ಕನ್ನ ಬಿದ್ದಿದೆ, ನಿನ್ನ ಮನಸ್ಸು …ಲಸಾಗಿದೆ' ಎಂದು ಬೈಯುತ್ತಾರೆ. 'ಕ್ಷಮೆ' ಎಂಬುದು

ಸಹಿಸಲಾರದ ಗುಣವೆಂದು ನಗ್ನಮುನಿಯ ಅಭಿಪ್ರಾಯ
'ಬುದ್ಧಕ್ಷಮೆ' ಎಂಬ ಕವನದಲ್ಲಿ ಕ್ಷಮಿಸುವ ಗುಣವನ್ನು ಅವರು
ತೀವ್ರವಾಗಿ ಟೀಕಿಸಿದ್ದಾರೆ.

ಕ್ಷಮೆ ಕ್ಷಮೆ ಕ್ಷಮೆ ಕ್ಷಮೆ
ಹುಲ್ಲು ತಿನ್ನುವುದಕ್ಕೆ ತಿಕ ತೊಳೆಯುವುದಕ್ಕೆ ಮಾತ್ರ
ಉಪಯೋಗಿಸುತ್ತಿರುವ ಕೈಗಳೆರಡನ್ನೂ ಕ್ಷಮಿಸುವುದು...
ಪ್ರಪಂಚ ಕ್ಷಣಕ್ಷಣವೂ ಕೊಚ್ಚೆಗುಂಡಿಯಾಗುತ್ತಿದ್ದರೂ
ಕೆಂಡಗಳನ್ನು ಸುರಿಸದೆ ಅರ್ಧನಿಮೀಲನವನ್ನು ನಟಿಸುತ್ತಿರುವ
ಈ ಕಣ್ಣುಗಳೆರಡನ್ನೂ ಕ್ಷಮಿಸುವುದು....

ಇಂತಹ ಕ್ಷಮೆಯಿಂದ ಜನರಿಗೆ ಉಪಯೋಗವಿಲ್ಲವೆಂದು ಸ್ಪಷ್ಟ
ಪಡಿಸುತ್ತಾರೆ ಕವಿ. ಇದೇ 'ಕ್ಷಮೆ'ಯಾಗುವುದಾದರೆ ಅದು
ಬೇಕಾಗಿಲ್ಲ ಎನ್ನುವಾಗ ಕವಿಹೃದಯ ಕೆಂಡವಾಗುತ್ತದೆ.
'ನಾಯಕರು ಪ್ರಜೆಗಳ ಮುಖಗಳ ಮೇಲೆ ಹೊಯ್ಯುತ್ತಿರುವ
ಉಚ್ಚೆಯನ್ನು ಕರುಣಾರಸವೆಂದು ನೆಕ್ಕುತ್ತಿರುವ ಈ ಯುವ
ಜನಾಂಗವನ್ನು' ಕ್ಷಮಿಸುವುದು ಸಾಧ್ಯವಿಲ್ಲವೆನ್ನುತ್ತಾರೆ. ಕೊನೆ

ಬುದ್ಧಾ, ನೀನೂ ನಿನ್ನ ಕ್ಷಮೆಯೂ ಬೇಕಿಲ್ಲ
ನೀನೊಬ್ಬನೇ ಬೋಧಿಯ ಕೆಳಗೆ ಸಾಯಿ—ಎನ್ನುತ್ತಾರೆ
ನಗ್ನಮುನಿ.

ನಿಖಿಲೇಶ್ವರ್

ಇವರು ತೆಲಂಗಾಣದ ನಲ್ಗೊಂಡ ಜಿಲ್ಲೆಯ ವೀರವಲ್ಲಿಯಲ್ಲಿ
ಹುಟ್ಟಿದರು. ಹುಟ್ಟಿದ ಮೇಲೆ ಒಂದು ಗಂಟೆ ಅಳಲೇ ಇಲ್ಲ.
ಸಾವಿನ ದವಡೆಯಲ್ಲಿದ್ದ ಮಗುವನ್ನು ಎಂಜಲೆಲೆಯ ಮೇಲೆ
ಮಲಗಿಸಿ ಕಸದ ತೊಟ್ಟಿಯಲ್ಲಿ ಎಸೆದರು. ಮೊದಲು ಹಳ್ಳಿಯಲ್ಲಿ
ಓದಿ ಆನಂತರ ಹೈದರಾಬಾದಿನ ರಸ್ತೆಗಳಲ್ಲಿ ಓದಲಾರಂಭಿಸಿದರು.

ರಿಗೆ ರವಿಶಂಕರ್ ಸಿತಾರ್ ತುಂಬ ಇಷ್ಟ. ಜೀವನ ಒಂದು ಯೋಗಾಲಯ ಎಂದು ನಂಬುತ್ತಾರೆ. ಈ ಪ್ರಸಂಗದಲ್ಲಿ ಸ್ವಂತಗಳಿಲ್ಲದ ದುಃಖ ತುಂಬಿದೆ. ಈ ತಲೆಮಾರಿಗೆ ವಿನೂತನ ಮಾಜ ವ್ಯವಸ್ಥೆಯನ್ನು ಕೊಡಬೇಕಾದರೆ ವೈಯಕ್ತಿಕ ತ್ಯಾಗ ತ್ಯ ಎನ್ನುತ್ತಾರೆ ಇವರು. ಹಿಂದಿ ಮತ್ತು ಇಂಗ್ಲಿಷ್‌ಗಳಲ್ಲೂ ಯುತ್ತಾರೆ. ಇವರು ಹೈದರಾಬಾದಿನ ಶಾಲೆಯೊಂದರಲ್ಲಿ ಗ್ಲಿಷ್ ಉಪಾಧ್ಯಾಯರು.

ನಿಖಿಲೇಶ್ವರ್ ದಿಗಂಬರ ಕವಿಯಾಗಿ ಪರಿಣಾಮಕಾರಿ ಕವನ ನ್ನು ಬರೆದದ್ದಲ್ಲದೆ ಅನಂತರ ಕಾಲದಲ್ಲೂ ಸಶಕ್ತ ಕಾವ್ಯ ತ್ರಾಣವನ್ನು ಮುಂದುವರಿಸಿದರು. ವಚನ ಪದ್ಯದಲ್ಲಿ ಶಿಲ್ಪ ನ್ನು ಬಯಸುವ ಚತುರ ಈ ಕವಿ. 'ಆತ್ಮಯೋನಿ' ಎಂಬ ನವಲ್ಲಿ ಸಾಹಿತ್ಯದಲ್ಲಿ ಪ್ರಾಚೀನವಾದುದೆಲ್ಲವನ್ನು ಅಲ್ಲಗಳೆದು ಸ ಸೃಷ್ಟಿಯಾಗಬೇಕೆಂಬುದನ್ನು ಒತ್ತಿ ಹೇಳುತ್ತಾರೆ:

> ನನ್ನ ಜನ ನರೇಂದ್ರನ ತೆಕ್ಕೆಯಲ್ಲೇ
> ಮಲಗಿರಲಿ
> ಎಚ್ಚರಿಸಬೇಡ
> ಕುತ್ತಿಗೆ ಕಿವುಚಿ ಸೀಳಿದುಕೊಳ್ಳುತ್ತಾನೆ

ಎಂದಾಗ ರಾಜಮಹಾರಾಜರ ಆಶ್ರಯದಲ್ಲಿ ಕವಿಗಳು ಜನತೆ ತ ಹೆಚ್ಚಾಗಿ ಆಶ್ರಯದಾತನಿಗೆ ಮಹತ್ವ ನೀಡಿದ್ದನ್ನು ಚಿಸಿದರು. 'ಭಾವಕವಿಗಳ ನಪುಂಸಕ ಹಾವಭಾವಗಳಿಗೆ ಾಲು, ಪ್ರಗತಿಶೀಲ ಸಾಹಿತಿ! ಗುಂಡುಹಾಕಿ ನಿದ್ರಿಸಿದೆ' ದಾಗ ಆಧುನಿಕ ಕವಿಗಳು ಕೂಡ ಜನಸಮೂಹಕ್ಕೆ ದೂರವಾದ ಯವನ್ನು ಸೂಚಿಸಿದರು. ನಾಗರಿಕತೆಯಿಂದ, ಯಾಂತ್ರಿ ಯಿಂದ ಉಂಟಾದ ನಿರಾಶೆ, ತುಮುಲ, ಹೊಸ ಸೃಷ್ಟಿಯ

ಬಗೆಗಿನ ಆಶಾಭಾವ ಈ ಮುಂದಿನ ಸಾಲುಗಳಲ್ಲಿ ವ್ಯಕ್ತವಾಗಿವೆ:

ಗದ್ಯವಿಲ್ಲ ಪದ್ಯವೂ ಇಲ್ಲ
ಚಪ್ಪಟೆಯಾದ ಚಪಾತಿ ಬದುಕು
ಫೈಲುಗಳ ನಡುವೆ ನಲುಗಿದ ಕಾಗದದ ಭೂತ
ನೀನೇರಿದೆ 'ಬಿಗ್‌ಬೆನ್' ಅಗ್ನಿಪರ್ವತವನ್ನು
ಇನ್ನು ಕಕ್ಕಲಿ!
ಸಮಸ್ತವೂ ಉರಿದು ಹೋಗಲಿ!
.... ಸಾಯಿ!
ದಿಗಂಬರ ಕಾವ್ಯದಲ್ಲಿ ಇನ್ನೊಬ್ಬ—ಇನ್ನೊಬ್ಬ
ನಿರಾಳವಾಗಿ ಸಹಜವಾಗಿ ಉಸಿರಾಡುವವನು
ಆತ್ಮಯೋನಿಯಿಂದ ಹುಟ್ಟಿ ಬರುತ್ತಿದ್ದಾನೆ.

ದೇಶದ ಬಗ್ಗೆ, ಜನರ ಬಗ್ಗೆ ನಿಖಿಲೇಶ್ವರ್‌ಗೆ ಅಪಾರ ಪ್ರೀತಿ. 'ನನ್ನ ದೇಶದಲ್ಲಿ ನಾನು ಒಬ್ಬಂಟಿ' ಎಂಬ ಕವನದಲ್ಲಿ ಸಾಮಾಜಿಕ ಕಳಕಳಿ ಇರುವ ಜನ ತಮ್ಮ ದೇಶ ಉಳಿಸಿದ ಮಹಾಸಮಸ್ಯೆಗಳ ನೇಣುಕುಣಿಕೆಗೆ ಸಿಕ್ಕಿ ಹೇಗೆ ನರಳುತ್ತಿದ್ದಾರೆಂಬುದನ್ನು ತಿಳಿಸಿದ್ದಾರೆ.

ಗಾಳಿಗೆ ಆರಿಹೋದ ದೀಪಗಳ ಬತ್ತಿಗಳು ಮಾತ್ರ
ಉಳಿದ ಕಗ್ಗತ್ತಲಲ್ಲಿ
ಸಾಲಾಗಿ ನಿಂತ ವಿದ್ಯುದ್ದೀಪಗಳಲ್ಲಿ
ನಾನು ನನ್ನ ದೇಶಕ್ಕೆ ಪರದೇಶಿ
ಜ್ವಲಿಸುತ್ತಿರುವ ಒಬ್ಬಂಟಿ
ಸ್ನೇಹ ಸೇತುವ ದೇಶದಲ್ಲಿ
ಸ್ನೇಹವಿಲ್ಲದ ಪ್ರತಿಯೊಬ್ಬನೂ ಒಂದೊಂದು ದ್ವೀಪ

ನಿಖಿಲೇಶ್ವರ್ ಬರೆದ ಅನೇಕ ಕವನಗಳಲ್ಲಿ ಸಮಾಜದ ಬಗ್ಗೆ ಅವರಿಗಿದ್ದ ಕಳವಳ ವ್ಯಕ್ತವಾಗಿದೆ. ಸುಂದರ ಸಮತಾ ವ್ಯವಸ್ಥೆಯನ್ನು ನಿರ್ಮಿಸಲು ಯುವಜನರನ್ನು ಆಹ್ವಾನಿಸುವ ಕವನಗಳನ್ನು ಅವರು ಬರೆದಿದ್ದಾರೆ. 'ಶವಗಳಿಗೆ ಸುತ್ತಿರುವ ಬಟ್ಟೆ

ಗಳನ್ನು ಬಿಚ್ಚುತ್ತಿರುವ ನಾಯಕರು, ಆರ್ಷೇಯ ಧರ್ಮವೆಂದು ಜಾತೀಯತೆಯನ್ನು ಬೋಧಿಸುತ್ತ ಬರ್ಬರತೆಯನ್ನು ಬೆಳೆಸುತ್ತಿರುವ ಬೋಧಕರು, ಬೆನ್ನುಮೂಳೆ ಇಲ್ಲದ ಬುದ್ಧಿಜೀವಿಗಳು ಶವಭೋಗಿಗಳಾಗಿದ್ದಾರೆಂದು' ನಿಖಿಲೇಶ್ವರ್ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ.

ನಮ್ಮಲ್ಲಿ ಹತ್ಯಾಪ್ರವೃತ್ತಿ ಬೆಳೆಯುತ್ತಿರುವುದು ನಿಖಿಲೇಶ್ವರ್‌ಗೆ ತೀವ್ರ ಆತಂಕ ಉಂಟುಮಾಡಿತು. ಈ ಹತ್ಯಾಪ್ರವೃತ್ತಿ ವ್ಯಕ್ತಿಗಳಲ್ಲಿ ಮಾತ್ರವಲ್ಲ, ನಾಗರಿಕ ದೇಶಗಳ ಧಮನಿಗಳಲ್ಲಿ ಬರ್ಬರ ಜನಾಂಗಗಳೂ ನಾಚಿಕೆಪಡುವಂತೆ ಪಾಶವೀ ಪ್ರವೃತ್ತಿ ಬೆಳೆಯುತ್ತಿದೆ. ರಕ್ತನದಿಗಳು ಭೂಗೋಳದ ಹೃದಯವನ್ನು ಸೀಳುತ್ತಿವೆ. ಮನುಷ್ಯರೇ ಆಯುಧಗಳನ್ನು ವಶಪಡಿಸಿಕೊಂಡು ಹತ್ಯಾಪ್ರವೃತ್ತಿಯ ಸಮಾಧಿಯ ಮೇಲೆ ಹೇರಿಸುವ ಕಾಲ ಬರಬೇಕೆಂಬುದು ನಿಖಿಲೇಶ್ವರ್ ಆಸೆ.

ದಿಗಂಬರ ಕಾವ್ಯ ಮುಖ್ಯವಾಗಿ ಗೊಡ್ಡು ಸಂಪ್ರದಾಯಗಳನ್ನು ಅಂಧ ವಿಶ್ವಾಸಗಳನ್ನು ಪ್ರತಿಭಟಿಸುತ್ತದೆ. 'ಇನ್ನು ತೊಲಗು' ಎಂಬ ಕವನದಲ್ಲಿ ನಿಖಿಲೇಶ್ವರ್ ಹೀಗೆನ್ನುತ್ತಾರೆ:

ನಾನು ಉದ್ಭವಿಸುವನು
ನನ್ನ ಹಿಂದೆ ಅಪಕ್ರಾಂತ ಉದ್ಭವನೆಯ ನೆರಳು
ನೆರಳಿನಲ್ಲಿ ಪ್ರತಿಫಲಿಸಿದ
ಬೆಳಕಿನ ಪ್ರವಾಹದಲ್ಲಿ
ಮೂರು ನೆರಳುಗಳು
೧. ಚರಿತ್ರೆ ಉಳಿಸಿದ ಭಾರ
೨. ಕ್ಷಣಿಕಾನಂದದ ಆವೇಶ
೩. ಮೌಲ್ಯಗಳ ಬೆಳಕಿನಲ್ಲಿ ವಿಷಾದ....

ವಾರ್ಷಿಕ ವಿಮರ್ಶೆಗಳೆಂಬ ತಿಥಿಗಳನ್ನು ಮಾಡಿ ತೃಪ್ತಿಪಡುವ

ವಿಮರ್ಶಕ ಗಾರ್ದಭಗಳು ಹೊತ್ತಿರುವ ಪೈಲಿಗೆ ಬಟ್ಟೆಗಳನ್ನು ಕಂಡು ಈ ಕವಿ ಅಸಹ್ಯಪಡುತ್ತಾರೆ. 'ಪ್ರತಿ ಮಾತಿನ ಹಿಂದೆ ಉರಿಯುವ ಜೀವನಾಕಾಂಕ್ಷೆ' ಇರಬೇಕೆನ್ನುತ್ತಾರೆ. ಈ ಜೀವನಾಕಾಂಕ್ಷೆಯನ್ನು ಪ್ರತಿಬಿಂಬಿಸುವ ಸಾಹಿತ್ಯವನ್ನು ಸೃಷ್ಟಿಸದ ಸಾಹಿತಿಗಳು, ಆಲೋಚಿಸದ ಮೇಧಾವಿಗಳು ವ್ಯರ್ಥವೆನ್ನುತ್ತಾರೆ. ಅಂತಹವರು ತೊಲಗಿದಾಗಲೇ ಭವಿಷ್ಯತ್ತಿನ ಮಾರ್ಗ ಸುಗಮವಾಗುತ್ತದೆಂಬುದು ಅವರ ಅಭಿಪ್ರಾಯ.

ಆಕಾಶದ ಕೆಳಗೆ ಯದ್ವಾತದ್ವಾ ಬೆಳೆದ
ಕುಹಕ ಮೇಧಾವಿ !
ಪ್ರಗತಿಗೆ ಸಂಕೋಲೆಯಂತೆ
ನಿನಗೆ ನೀನೆ ಶಿಲಾಶಾಸನವಾಗಿ
ಇನ್ನೂ ಏಕೆ ನಮ್ಮ ಮುಂದೆ
ಇನ್ನು ತೊಲಗು.

ಜ್ವಾಲಾಮುಖಿ

ಹೆಸರಿಗೆ ತಕ್ಕಂತೆ ಕೆಂಡ ಕಾರುವ ಕವಿ, ವಾಗ್ಮಿ. ಬಾಯಿ ಕಟುವಾದರೂ ಹೃದಯ ಮೃದು. ಹೈದರಾಬಾದಿನಲ್ಲಿ ಹುಟ್ಟಿ ಬೆಳೆದವರು. ಮನುಷ್ಯನನ್ನು ನಾಶಮಾಡುತ್ತಿರುವ ಮತವನ್ನು ನಾಶಮಾಡಬೇಕೆಂಬ ಉದ್ದೇಶ ಇರುವವರು. ಮಾನವಕಲ್ಯಾಣಕ್ಕಾಗಿ ಶ್ರಮಿಸಲು ಲೇಖಕರು ಒಂದಾಗಬೇಕೆಂಬ ಅಭಿಪ್ರಾಯವುಳ್ಳವರು. ಇದಕ್ಕಾಗಿ ಲೇಖಕರೆಲ್ಲರೂ ದುಷ್ಟಶಕ್ತಿಗಳ ಮೇಲೆ ಯುದ್ಧ ಪ್ರಕಟಿಸಬೇಕೆನ್ನುತ್ತಾರೆ. ಯಾವ ಅತಿಮಾನುಷ ಶಕ್ತಿಯಲ್ಲೂ ವಿಶ್ವಾಸವಿಲ್ಲ, ಮಾನವನ ಅಂತಃಶಕ್ತಿಯಲ್ಲಿ ಮಾತ್ರ ವಿಶ್ವಾಸ. ಜಗತ್ತಿನಲ್ಲಿ ಐದುವರ್ಷ ತುಂಬಿದವರೆಲ್ಲರೂ ಹುತ್ಯಾತ್ಮರಾದ ಸತ್ತರೆ ಶಾಂತಿ ಲಭಿಸುವುದೇನೋ ಎಂಬ ಆಸೆ.

ಉರುಳಿ ಹೋದ ಗುಡಿಗೋಡೆಗಳನ್ನು ಬಿಟ್ಟು
ಮುಂದಕ್ಕೆ ಹೆಜ್ಜೆ ಇಡಲಾರೆವು
ಗಬ್ಬು ಹಿಡಿದ ಸತ್ತವ ಮಡುಗಳೇ
ಮೋಕ್ಷ ಮಾರ್ಗದ ವೇದಾಂತವೆನ್ನುತ್ತೇವೆ

ಎಂದು ಖೇದ ಪಡುತ್ತಾರೆ ಕವಿ.

ಅಲ್ಪತನವನ್ನು ನಾವೆಲ್ಲರೂ
ಸಂಪ್ರದಾಯವನ್ನಾಗಿಸಿ ಕೊಂಡಿದ್ದೇವೆ.
ಎಂದೆಂದಿಗೂ ನಮಗೆ ಅರ್ಥವಾಗದಿರುವುದು
ಸರ್ವಮಾನವ ಕಲ್ಯಾಣ

ಎಂದಾಗ ಜ್ವಾಲಾಮುಖಿಯು 'ಅವಲೋಕನ' ಎಂಥದೆಂಬುದು ಅರ್ಥವಾಗುತ್ತದೆ.

ಇವರ ಪ್ರಸಿದ್ಧ ಕವಿತೆಗಳಲ್ಲಿ 'ಶಸ್ತ್ರ ಚಿಕಿತ್ಸೆ' ಒಂದು. ಮಿತಿಮೀರಿ ಬೆಳೆದ ರೋಗಕ್ಕೆ ಒಮ್ಮೊಮ್ಮೆ ಶಸ್ತ್ರ ಚಿಕಿತ್ಸೆ ಒಂದೇ ಮಾರ್ಗವಾಗಿರುತ್ತದೆ. ಸಮಕಾಲೀನ ಸಮಾಜದ ರೋಗ ರುಜಿನಗಳ ಸ್ವರೂಪವನ್ನು ಎತ್ತಿ ತೋರಿಸಲು ಕವಿ ಪ್ರಯತ್ನಿಸಿದ್ದಾರೆ. ಬೃಹದಾಕಾರವಾಗಿ ಬೆಳೆದು ಅಸಹ್ಯವಾದ ಜಾತವಾಗಿರುವ ರೋಗ, ಕಶ್ಮಲವಾಗಿ ಘನೀಭವಿಸಿದ ರೀತಿಯನ್ನು ವರ್ಣಿಸುತ್ತಾರೆ. ಈ ವಿಚಿತ್ರವ್ಯಾಧಿ ವಿಕಾರ ರೂಪವಾಗಿ ಗಡ್ಡೆ ಕಟ್ಟಿದ ವ್ರಣವಾಗಿ ಬಾಧಿಸುತ್ತಿದೆ.

ವಿಶ್ವವಿದ್ಯಾಲಯಗಳ ಸಿದ್ಧಸೂತ್ರಗಳು
ಪುಣ್ಯ ಕ್ಷೇತ್ರಗಳ ವ್ಯಾಪಾರ ಹುಂಡಿ ಲೂಟಿ ಮುಡಿಪುಗಳು
ಮಠಾಧಿಪತಿಗಳ ಮಹಾ ಮಹಾ ನೈವೇದ್ಯಗಳು
ಭರತಮಾತೆಯನ್ನು ಶಾಶ್ವತ ರೋಗಿಯನ್ನಾಗಿಸಿವೆ.

ಎಂಬುದು ಜ್ವಾಲಾಮುಖಿಯ ಕೊರಗು. ಭರತಮಾತೆಗೆ ಬದುಕು ಭಾರವಾಗಿದೆ. ಗರ್ಭಾಯಾಸ ದುರ್ಭರವಾಗಿದೆ. ಭರತಮಾತೆ ಬದುಕಬೇಕು, ಬದುಕಿಸಬೇಕು. ತಾಯಿಯನ್ನು

ರಕ್ಷಿಸಲು ಹಿಂಸೆ ಕ್ರಾಂತಿಗೆ ಸೂಲಗಿತ್ತಿಯಾಗಬೇಕೆಂದು ಕವಿ ಸೂಚಿಸುತ್ತಾರೆ.

ನೆತ್ತರು ಬಟ್ಟಿಗಳ ನಡುವೆ ಕ್ರಾಂತಿ ಶಿಶು
ಚಂಡಪ್ರಚಂಡವಾಗಿ
ಮಧ್ಯಂದಿನ ಮಾರ್ತಾಂಡ ತೇಜದಿಂದ ಪ್ರಜ್ವಲಿಸಬೇಕು
ಮುಂಭಾಗದಲ್ಲಿ ಮೌನವಾಗಿ ಮೆರೆಯುತ್ತಿರುವ
ಶಸ್ತ್ರ ವೈದ್ಯನ ಸಾಣೆ ಹಿಡಿದ ಕತ್ತಿಗಳು
ಅನಿವಾರ್ಯವಾಗಿ ಆಹ್ವಾನಿಸುತ್ತಿವೆ.

ಚೆರಬಂಡರಾಜು

ದಿಗಂಬರ ಕವಿಯಾಗಿ ಇದ್ದಾಗ, ಅನಂತರ ಕಾಲದಲ್ಲಿ ಕ್ರಾಂತಿಕಾರಿ ಲೇಖಕರಾಗಿ ದುಡಿದಾಗ ಅತ್ಯಂತ ಪ್ರಾಮಾಣಿಕರಾಗಿ ಬರಹದಲ್ಲಿ ತೊಡಗಿದ್ದವರು. ಮಿತಭಾಷಿ, ಮೃದುಸ್ವಭಾವದವರು. ಆದರೆ ದೃಢವಾದ ಮನಸ್ಸು. ಶೈಲಿ ಮೃದುವಾದರೂ ಮನಸ್ಸನ್ನು ನೇರವಾಗಿ ಸೆಳೆಯುವಂತಿರುತ್ತದೆ. ಹೈದರಾಬಾದಿನ ಹತ್ತಿರದ ಅಂಕುಶಾಪುರವೆಂಬ ಗ್ರಾಮದಲ್ಲಿ ಹದಿನೈದು ದಿನಗಳ ಪ್ರಸವವೇದನೆ ಅನುಭವಿಸಿ ತಾಯಿ ಸಾಯುತ್ತಿರುವಾಗ ನೆಲಕ್ಕೆ ಬಿದ್ದರು. ಕಡಲ ತೀರದ ಮರಳು ದಿಣ್ಣೆಗಳ ಮೇಲೆ ಒಂಟಿಯಾಗಿ ಕುಳಿತುಕೊಳ್ಳುವುದು, ಮಳೆಯಲ್ಲಿ ನೆನೆಯುವುದು, ವಿಷಾದ–ಇವು ಇವರಿಗೆ ಇಷ್ಟವಾದ ವಿಷಯಗಳು. ಮನುಷ್ಯನಿಗಾಗಿ ಸಾಯಲು ಸಿದ್ಧ ; ಭಗವಂತನ ಮೇಲೆ ಮಾತ್ರ ದ್ವೇಷ.

ದಿಗಂಬರ ಕವಿಗಳ ಸಂಕಲನದಲ್ಲಿ ಚೆರಬಂಡರಾಜು ಬರೆದ ಕವನಗಳು ಒಂದಲ್ಲ ಒಂದು ರೀತಿಯಲ್ಲಿ ಮನಸೆಳೆಯುತ್ತವೆ.

'ಕಟಿಕಟಿ ಹತ್ತಲು ಬಿಡಿ ನನ್ನ' ಎಂಬುದು ಜನರನ್ನು ಜೀವನ ನ್ಯಾಯದ ಬಗ್ಗೆ ಚಿಂತಿಸುವಂತೆ ಪ್ರೇರಿಸುತ್ತವೆ.

ಕರಿಕೋಟು ಸೀಲಿ ನೋಟುಗಳಿಂದ
ಒಂದು ದೇಶದ ಒಂದು ಕೋರ್ಟಿನಲ್ಲಿ
ಫೈಸಲಾಗುವ ಕೇಸಲ್ಲ ನನ್ನದು—

ಎಂದು ಹೇಳುವಾಗ ಮಾನವನ ಸಮಸ್ಯೆಗಳು ಕೇವಲ ಒಂದು ನ್ಯಾಯಾಲಯದಲ್ಲಿ ಪರಿಹಾರವಾಗುವಂಥವಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಾರೆ.

ಈ ಸುವಿಶಾಲ ಪ್ರಪಂಚ ನ್ಯಾಯಾಲಯದಲ್ಲಿ
ನಿಜವಾದ ನ್ಯಾಯಾಲಯ ಎಲ್ಲಾದರೂ ಇರುವುದಾದರೆ
ಕಟಿಕಟಿ ಹತ್ತಲು ಬಿಡಿ ನನ್ನ—ಎಂದು ಹೇಳುತ್ತಾ

'ನನ್ನ ಹೃದಯ ಹಿಂಡುವ ಬೆಟ್ಟಗಳಂತಹ ಸಂದೇಹಗಳು' ಎಂದು ಅವರ ಪಟ್ಟಿಯನ್ನು ಬಿಚ್ಚುತ್ತಾರೆ.

ನನ್ನ ಧ್ಯೇಯವಾದ ವಿಶ್ವಶಾಂತಿ
ಯುದ್ಧಗಳಿಗೆ ಸಿಲುಕಿತವೇ ?
ಈ ವೇದನೆ ಅನೃತವೇ ?—ಎಂದು ಪ್ರಶ್ನಿಸುತ್ತಾರೆ
ಲೋಕವೊಂದು ನಗ್ನ ಶಿಲಾಫಲಕದಂತೆ ಕಾಣಿಸುತ್ತಿದೆ
ಪರಮಾತ್ಮನ ನಿಜನಾಮ ನಗ್ನಪ್ರಿಯ ಎನಿಸುತ್ತದೆ—

ಎಂದು ದಿಗಂಬರವಾಗಿ ಹೇಳಬೇಕಾದುದರ ಅಗತ್ಯವನ್ನು ಒತ್ತಿ ಹೇಳುತ್ತಾರೆ.

ಚೆರಬಂಡರಾಜುವಿನ ಅನೇಕ ಗೀತೆಗಳಲ್ಲಿ ಕೋಪ, ಆಕ್ರೋಶಗಳಿಗಿಂತ ಹೆಚ್ಚಾಗಿ ನೋವು, ಕಳಕಳಿ, ಆತಂಕ ಕಂಡುಬರುತ್ತವೆ. 'ನೋಡಲಾರೆ' ಎನ್ನುವ ಗೀತೆಯಲ್ಲಿ ಬಾಡಿದೆಲೆಗಳ ಹೃದಯಗಳನ್ನು, ಭಯಭೀತಿಗಳಿಂದ ತಿರುಗಾಡುವ ಮಾನವರನ್ನು ನೋಡಲಾರೆನೆಂದು ಘೋಷಿಸುತ್ತಾರೆ.

‘ಛಂದೋಬದ್ಧ ಸಾಹಿತ್ಯ ವೃಕ್ಷದಲ್ಲಿ ಕೀಟಗಳು ಕೊರೆಯುತ್ತಿವೆ’ ಎಂದಾಗ ಸಾಹಿತ್ಯದ ಸ್ತಬ್ಧತೆ ಸೂಚಿತವಾಗಿದೆ.

ನನ್ನ ಮನೆ ಮುಂದಿನ ಗರಿಕೆ ಚೂರೂ ಸಹ
ನಿಟ್ಟುಸಿರು ಬಿಟ್ಟು ಪ್ರಾಣ ಬಿಗಿ ಹಿಡಿದಿರುವ ವೇಳೆ
ನಿರಾತಂಕವಾಗಿ ನಿದ್ರಿಸುವವನು ಯಾರು

ಇಲ್ಲಿ ಸಮಕಾಲೀನ ಯಾಂತ್ರಿಕ ಜೀವನ ಸಾಮಾನ್ಯನ ಪ್ರಾಣಾಂತಕವಾಗಿ ಪರಿಣಮಿಸಿರುವ ವಿಷಯವನ್ನು ಸೂಚಿಸಿದ್ದಾರೆ.

ನೋಟದಲ್ಲಿ ಚೂರಿಗಳ ಕಸರತ್ತು
ಮಾತಿನಲ್ಲಿ ಹೆಡೆ ಎತ್ತಿದ
ನಾಗರಹಾವಿನ ಒಯ್ಯಾರ
ನೋಡಲಾರೆ ನೋಡಲಾರೆ
ನೋಡಲಾರೆ—ಎಂಬಂತಹ ಮಾತುಗಳು ಚೆರಬಂಡರಾಜು

ಅವರ ತೀವ್ರ ಅನುಕಂಪ, ಆತಂಕಗಳಿಗೆ ಪ್ರತೀಕವಾಗಿವೆ. ಅವರ ಮಾತುಗಳಲ್ಲಿ ಪ್ರಾಮಾಣಿಕತೆ ಇದೆ, ಖಚಿತತೆ ಇದೆ, ಸಮಸ್ಯೆಗಳ ಬಗೆಗಿನ ತಿಳಿವಳಿಕೆ ಇದೆ.

ಹೆಜ್ಜೆ ಹೆಜ್ಜೆಗೊಂದು ಸಹರಾ ಮರುಭೂಮಿ
ಪ್ರಪಂಚದಲ್ಲಿ ಪ್ರತಿಯೊಬ್ಬನ ತಲೆಯ ಮೇಲೆ
ಒಂದೊಂದು ಹಿಮಾಲಯ—ಎಂಬ ಸಾಲುಗಳು

ಸಮಸ್ಯೆಯ ಬೃಹದಾಕಾರವನ್ನು ತಿಳಿಯಪಡಿಸುತ್ತವೆ.

ಇಂತಹ ಸಮಸ್ಯೆಗಳಿಂದ ತಪ್ಪಿಸಿಕೊಂಡು ಓಡುವುದು ಪರಿಹಾರವಾಗುವುದಿಲ್ಲ. ಈ ಕವಿ ‘ಎದ್ದೇಳು’ ಎಂದು ಹೊಡೆದೆಬ್ಬಿಸುವವನೇ ಹೊರತು ಜೋಗುಳ ಹಾಡುವ ಮೋಡಿಗಾರನಲ್ಲ. ರಾಜಕಾರಣಿಗಳನ್ನು ಕುರಿತು ‘ಅಧಿಕಾರ ಕ್ಷಯ ಪೀಡಿತ ನಿರಂಕುಶ ರಾಜಕೀಯ ಹೆಗ್ಗಣಗಳು ಸಾಯಿಸವಿದ್ದರೆ

ನಾಯಕರು' ಎನ್ನುತ್ತಾರೆ. 'ನಿರ್ಲಿಪ್ತನಾಗಿ ನೋಡುತ್ತಾ ನಿಂತ ಬುದ್ಧಿಜೀವಿಗಳನ್ನು ಮನ್ನಿಸಬೇಡ' ಎಂಬುದು ಇವರ ಸಲಹೆ. ಮಾನವತೆಯನ್ನು ಮರೆಯುವುದರಿಂದಲೇ ಈ ಅನರ್ಥಗಳು ಸಂಭವಿಸುತ್ತಿವೆ.

ನಿನ್ನ ಗುರಿಯೆಂಬ ಸೂರ್ಯನನ್ನು ಮಾತ್ರ
ಹಿಡಿತದಿಂದ ಜಾರಿಬಿಡಬೇಡ
ಪ್ರಾಣವನ್ನು ಪಣವಾಗಿಟ್ಟಾದರೂ
ಈ ಜಗತ್ತಿಗೆ ಮಾನವತಾಭಿಕ್ಷೆ ನೀಡು
ಏಳು, ಎದ್ದೇಳು—ಎಂಬುದು ಈ ಕವಿಯ ಪ್ರಬೋಧ.

ಚಿರಬಂಡರಾಜು ಬರೆದ ಕವನಗಳಲ್ಲಿ 'ವಂದೇಮಾತರಂ' ಎಂಬುದು ಸರ್ಕಾರದ ನಿಷೇಧಕ್ಕೆ ಗುರಿಯಾಯಿತು. ಇದರಲ್ಲಿ ಮಾತೃಭೂಮಿಯ ಸಮಕಾಲೀನ ಸ್ಥಿತಿಯನ್ನು ಕವಿ ಬಯಲಿಗೆಳೆದಿದ್ದಾರೆ.

ಅಂತಾರಾಷ್ಟ್ರೀಯ ಬಜಾರಿನಲ್ಲಿ ಅಂಗಾಂಗಗಳನ್ನು ಒತ್ತೆ ಇಟ್ಟ
ಅಂದ ನಿನ್ನದು
ಸಿರಿವಂತರ ತೆಕ್ಕೆಯಲ್ಲಿ ಮೈಮರೆತು ನಿದ್ರಿಸುತ್ತಿರುವ
ಯೌವನ ನಿನ್ನದು

ಎಂದು ಬರೆದಾಗ ಮಾತೃಭೂಮಿ ಯಾವ ಸ್ಥಿತಿಯಲ್ಲಿದೆ ಎಂಬ ಕೊರಗು ಕಾಣಿಸುವುದೇ ಹೊರತು ಅಸಭ್ಯ ಎನಿಸುವುದಿಲ್ಲ.

ಬಾಯಿಗೆ ಸಿಗದ ಸಸ್ಯಶ್ಯಾಮಲೆ ನೀನು—ಎಂಬಲ್ಲಿ 'ಸಸ್ಯಶ್ಯಾಮಲಾ' ಎನ್ನುವುದು ಕೇವಲ ಮಾತಾಗಿಬಿಟ್ಟಿದೆ ಎಂಬ ದುಃಖವಿದೆ.

ದಿಗಂಬರ ಕವಿತೆಗಳ ಸಾಲಿನಲ್ಲಿ ಈ ಕವಿಯ 'ತುಕ್ಕು ತುಕ್ಕು' 'ಜಗದ್ಗುರುಗಳು ಬರುತ್ತಿದ್ದಾರೆ ಎಚ್ಚರಿಕೆ' ಎಂಬ ಕವನಗಳು ಯುವಪೀಳಿಗೆಯ ಮೇಲೆ ತುಂಬ ಪ್ರಭಾವ ಬೀರಿದುವು.

ಕಾಲೇಜು ಮೆಟ್ಟಿಲುಗಳಲ್ಲಿ ತುಕ್ಕು
ಪತ್ರ ಪುಸ್ತಕಗಳಲ್ಲಿ ತುಕ್ಕು
ಬೋಧಕವರ್ಗದಲ್ಲಿ ತುಕ್ಕು
ಪದವಿಗಳಲ್ಲಿ ತುಕ್ಕು

ಎಂದು ತುಕ್ಕು ಹಿಡಿದ ಸಮಾಜದ ಪದರ ಪದರವನ್ನು ಬಿಚ್ಚಿ ತೋರಿಸಿದ್ದಾರೆ.

ತುಕ್ಕು ನೆಕ್ಕಿ ನಮ್ಮ ಮರೆಯಬೇಡಿ
ಆಗಾಗಲೇ ಅಲ್ಲಲ್ಲೇ
ಕುಲುಮೆ ಇಟ್ಟು ಜಡಿಜಡಿದು
ತುಕ್ಕು ಹೋಗಲಾಡಿಸಬೇಕು
ಯುಗ ನಿಮ್ಮದು
ಭಾರ ನಿಮ್ಮದು
ಜವಾಬ್ದಾರಿ ನಿಮ್ಮದು
ಭವಿಷ್ಯ ನಿಮ್ಮದು

ಈ ಕವಿಗೆ ಭವಿಷ್ಯತ್ತಿನ ಬಗ್ಗೆ ಎಷ್ಟು ಕಳಕಳಿ ಇದೆ ಎಂಬುದನ್ನು ಈ ವಾಕ್ಯಗಳು ಸೂಚಿಸುತ್ತವೆ.

ಜಗದ್ಗುರುಗಳ ಆಟಾಟೋಪಗಳನ್ನು ಬಯಲಿಗೆಳೆಯುವ ಕವನ 'ಜಗದ್ಗುರುಗಳು ಬರುತ್ತಿದ್ದಾರೆ ಎಚ್ಚರಿಕೆ'

ಪಲ್ಲಕ್ಕಿಯಲ್ಲಲ್ಲದೆ ಪ್ರಯಾಣ ಮಾಡರು
ಹಣಸಂತರ ಮಹಲುಗಳಲ್ಲದೆ ಗುಡಿಸಲುಗಳ ನೆನೆಯರು
ಕಾಲಿದ್ದೂ ಕುಂಟರು—ಎಂದು ವರ್ಣಿಸಿದ್ದಾರೆ.

ಅಂತಹ ಮಾಯಾವಿ ಕಳ್ಳ ಸನ್ಯಾಸಿಗಳಿಂದ ದೇಶವನ್ನು ಕಾಪಾಡಲು ಕಂಕಣ ತೊಡಬೇಕೆಂದು ಹೇಳಿ 'ಒಳ್ಳೆಯತನಕ್ಕೆ ಪತಾಕೆ ಎತ್ತುವ ಮಾನವನೆಂದು ನುತ್ತೊಮ್ಮೆ ದೃಢಪಡಿಸು' ಎಂದು ಬೋಧಿಸುತ್ತಾರೆ.

ಭೈರವಯ್ಯ

೧೯೪೨ರ ಒಂದು ನಡುರಾತ್ರಿ ಕಣ್ಣು ತೆರೆದರು. ಆಗ ಬಿರುಗಾಳಿ ಬೀಸಿತ್ತು, ಮೋಡಗಳು ಗುಡುಗಿದುವು, ಸಿಡಿಲುಗಳು ಸಿಡಿದು ಬಿದ್ದುವು. ನರಸಾಪುರದಲ್ಲಿ ಹುಟ್ಟಿ ವಿಜಯವಾಡ, ಹೈದರಾಬಾದುಗಳಲ್ಲಿ ಓದಿದರು. ಎದೆಯಲ್ಲಿ ಅಗ್ನಿಪರ್ವತಗಳು ಸಿಡಿಯುತ್ತಿದ್ದರೂ ನಗುತ್ತಿರಬೇಕೆಂಬ ಆಸೆ. ಜೀವನ ಒಂದು ಗಹನ ವಿಷಯವೆಂದು ಗಂಭೀರವಾಗಿ ನಗುತ್ತಾರೆ. ಇವರ ಕಾವ್ಯದಲ್ಲಿ ವ್ಯಂಗ್ಯ ಹೆಚ್ಚು.

'ದಿಗಂಬರ' ಎಂಬ ಕವನದಲ್ಲಿ ದಿಗಂಬರ ಕಾವ್ಯದ ಗುರಿಯೇನು ಎಂಬುದನ್ನು ಭೈರವಯ್ಯ ಸ್ಪಷ್ಟಪಡಿಸಿದರು :

ದಿಗಂಬರತ್ವ
ಬಟ್ಟೆ ಬಿಚ್ಚಿ ತೋಳು ಚಾಚಿ
ನಡುರಸ್ತೆಯಲ್ಲಿ ನೆಗೆದಾಡುವುದಲ್ಲ

ಹಾಗಾದರೆ ಯಾವ ರೀತಿಯ ದಿಗಂಬರತ್ವ ಬಯಸುತ್ತಾರೆ?

ಮನುಷ್ಯನ ಅಂತರಾಳದ ಕೊಚ್ಚೆಗುಂಡಿಯಲ್ಲಿ
ಬಿದ್ದಿರುವ ಮಹಾಮನುಷ್ಯನನ್ನು ಮೇಲೆತ್ತುವುದು
ಮೂಳೆಗಳ ಆಳಗಳಲ್ಲಿ ಧ್ವನಿಸುವ
ಸ್ವಚ್ಛವಾದ ಗೀತೆಗಳನ್ನು ಪ್ರತಿಧ್ವನಿಸುವುದು
ಕಣ್ಣ ಹಿಂದೆ ಅಡಗಿರುವ
ನಿಜವಾದ ಕಣ್ಣೀರನ್ನು ಸುರಿಸುವುದು
ಹೃದಯ ತೀರಕ್ಕೆ ಬಡಿದೋಡುವ
ಸಹಜ ಭಾವನೆಗಳನ್ನು ಕೌಶಲದಿಂದ ಹಿಡಿಯುವುದು
ತುಟಿಯ ತುದಿಯಲ್ಲಿ
ಅಪ್ಪಟ ಕಿರುನಗೆಯನ್ನು ಮೂಡಿಸುವುದು
ನಿಜವನ್ನು ನಿಜವಾಗಿ ನಗ್ನವಾಗಿ ಹೇಳುವುದು.

ಇಂತಹ ನಿಜ ಎಲ್ಲರಿಗೂ ಅರ್ಥವಾಗುವುದಿಲ್ಲ. ಅವರಲ್ಲೂ ಪದಗಳ ಗಾರುಡಿಯಲ್ಲಿ ಪರಮಾರ್ಥ ಕಾಣುವ ಪಕ್ಷಿಗಳಿಗೆ ಅರ್ಥವೇ ಆಗುವುದಿಲ್ಲ. ಇವು ಅರ್ಥವಾಗಬೇಕಾದರೆ ಹೃದಯ ಗಳು ಕೊತಕೊತ ಕುದಿಯಬೇಕು, ಕುದಿದ ಹೃದಯದಲ್ಲಿ ಬಿಸಿರಕ್ತ ಹುಟ್ಟಬೇಕು. ಹುಟ್ಟಿದ ರಕ್ತ ನರಗಳ ಕಾಲುವೆ ಗಳಲ್ಲಿ ಸುಳಿ ತಿರುಗಿ ನರ್ತಿಸಬೇಕು.

ಕಾವ್ಯ ಎಂಬುದು ಸಂಪ್ರದಾಯದಲ್ಲಿ ಎಷ್ಟೆಲ್ಲ ಕೆಟ್ಟುಹೋಗಿದೆ ಎಂಬುದನ್ನು 'ಕೆಡಿಸಲ್ಪಟ್ಟ ಹಾಡು ನಾನು' ಎಂಬ ಕವನದಲ್ಲಿ ನಿರೂಪಿಸಿದ್ದಾರೆ. 'ತುಟ್ಟಿಭಿಕ್ಷೆ' ಎಂಬ ಕವನದಲ್ಲಿ ಒಂದೊಂದು ವರ್ಷ ಹೆಚ್ಚುತ್ತಾ ಹೋಗುವ ತುಟ್ಟಿಭತ್ಯಕ್ಕಾಗಿ ಉದ್ಯೋಗಿಗಳು ಹಂಬಲಿಸುವ ರೀತಿ, ಭತ್ಯ ಹೆಚ್ಚಿಸಿ ಬಾಯಿ ಮುಚ್ಚಿಸುವ ಸರ್ಕಾರದ ನೀತಿ ಪರಿಣಾಮಕಾರಿಯಾಗಿ ಮೂಡಿಬಂದಿವೆ.

ತಮ್ಮಾ ಹೆದರಬೇಡ
ತುಟ್ಟಿಭತ್ಯೆ ಹೆಚ್ಚಲಿದೆ
ಹೆಬ್ಬಾವಿನ ಬಾಯೊಳಗೆ ನೊಣದ ಮರಿ ನುಗ್ಗಲಿದೆ

ಎಂದು ಹೇಳುವಲ್ಲಿ ಉದ್ಯೋಗಿಗಳ ಆಸೆ ಮತ್ತು ತುಟ್ಟಿಭತ್ಯದ ಪ್ರಮಾಣ ವ್ಯಂಗ್ಯವಾಗಿ ಮೂಡಿಬಂದಿದೆ. ಈ ಭತ್ಯೆಯಿಂದ ಏನೇನು ಮಾಡಬಹುದೆಂಬುದನ್ನು ಭೈರಮಯ್ಯ ಮನಮುಟ್ಟು ವಂತೆ ನಿರೂಪಿಸಿದ್ದಾರೆ.

ನಿನ್ನ ಬಾಳಿನಂತೆ ಹರಿದುಹೋದ ಷರಟಿಗೆ
ಹೊಸ ತೇಪೆ ಹಚ್ಚಬಹುದು
ಅರ್ಧಾಂಗಿಯ ನೇತ್ರದಲ್ಲಿ ಅರೆಕ್ಷಣ
ಕಾಂತಿ ನಿಲ್ಲಿಸಬಹುದು
ಆಕಾಶದಲ್ಲಿರುವ ನಕ್ಷತ್ರಗಳ ಕಡೆ
ಆಶೆಗಳ ಕಡೆ ಆಸೆಯಿಂದ ನೋಡಬಹುದು.

ತುಟ್ಟಿಭತ್ಯೆ ಭಿಕ್ಷೆಗೆ ಸಮಾನ. ಅದನ್ನು ಸರ್ಕಾರ ಪ್ರಕಟಿಸಿದಾಗೆಲ್ಲ ಬೆಲೆಗಳೂ ಹೆಚ್ಚುತ್ತವೆ. ಇದನ್ನು ಸೂಚಿಸುವ ಮುಕ್ತಾಯ ಹೀಗಿದೆ :

ತಮ್ಮಣ್ಣಾ
ನಿನ್ನ ತುಟ್ಟಿ ಭಿಕ್ಷೆ ತಪ್ಪದೆ ಹೆಚ್ಚಲಿದೆ
ಹೆಬ್ಬಾವು ಮತ್ತೊಮ್ಮೆ ಆಕಳಿಸುವುದು

'ನಾನು ದೇವರನ್ನು ನಂಬುತ್ತೇನೆ' ಎಂಬ ಕವಿತೆಯಲ್ಲೂ ಭೈರವಯ್ಯ ನಿಜವಾದ ದೇವರೆಂದರೆ ಹೇಗಿರಬೇಕೆಂಬುದನ್ನು ಖಚಿತಪಡಿಸಿದ್ದಾರೆ. 'ದೇವರೆಂದರೆ ಬಡ್ತಿಗಳಿಗಾಗಿ ಮುಡಿಪುಗಳನ್ನು ಸ್ವೀಕರಿಸುವವನಲ್ಲ, ವಿನೋದಕ್ಕಾಗಿ ಗ್ಲಾಮರ್‌ಗಾಗಿ ಪೂಜೆ ಸ್ವೀಕರಿಸುವವನಲ್ಲ.' ಈ ಕವಿ ಹೇಳುವ ದೇವರು ಮಾನವನನ್ನು ಮಾನವನನ್ನಾಗಿ ಗುರುತಿಸುವವರು. ಸಾಮಾನ್ಯ ಮಾನವನಿಗಾಗಿ ಮರುಗುವ ಹೃದಯದಲ್ಲೇ ದೇವರಿದ್ದಾನೆ.

ನನ್ನ ದೇವರು
ರಕ್ತ ಮಾಂಸವಿರುವ ಮಾನವ
ಮಾನವತ್ವವನ್ನು ಬಿಟ್ಟು
ಮತ್ತೊಂದು ಮತವನ್ನು ಅಂಗೀಕರಿಸುವುದಿಲ್ಲ

ಎಂಬ ಸ್ಪಷ್ಟ ನಿಲುವನ್ನು ಈ ಕವಿ ಪ್ರಕಟಿಸಿದರು.

ಮಹಾಸ್ವಪ್ನ

ನೆಲ್ಲೂರು ಜಿಲ್ಲೆಯ ಲಿಂಗಸಮುದ್ರದಲ್ಲಿ ಹುಟ್ಟಿ ಹೈದರಾಬಾದಿನ ಆಕಾಶವನ್ನು ಭೂಮಿಯನ್ನು ಓದಿದವರು. ಈ ಪ್ರಪಂಚದ ಮುಸುಕುಗಳನ್ನು ತೊಲಗಿಸಲೆಂದೇ ಹುಟ್ಟಿದೆ ಎನ್ನುತ್ತಾರೆ. ಇವರು ಸದಾಕಾಲ ಮಾನವತೆಗಾಗಿ,

ಸಮಾಜದ ಒಳಿತಿಗಾಗಿ ಅನ್ವೇಷಿಸುತ್ತಿರುತ್ತಾರೆ. ಇವರು ಬಳಸುವ ಪ್ರತೀಕಗಳು ಒಮ್ಮೊಮ್ಮೆ ಅರ್ಥವಾಗುವುದಿಲ್ಲ ಎಂಬ ದೂರು ಇದೆ.

ನನ್ನ ಹೆಸರು ಊರು ಮರೆತು ಹೋಗಿ
ನನ್ನ ಆಕಾರ ಬೇರೆಯಾಗಿ ನನ್ನ ನಾನೇ ಕಳೆದುಕೊಂಡು
ಈ ಹುಚ್ಚಾಸ್ಪತ್ರೆಯ ಜೋತ ಮಂಚದ ಮೇಲೆ
ಒಂಟಿಯಾಗಿ ಕಣ್ಣುಬಿಟ್ಟ ದಿನ

ಎಂದು ಕಥೆಯನ್ನು ಹೇಳಲು ಪ್ರಾರಂಭಿಸುತ್ತಾರೆ ಈ ಕವಿ. ಎಲ್ಲಿ ನೋಡಿದರೂ ಪ್ರೇತಾತ್ಮಗಳ ಹಾಹಾಕಾರ, ಬೇಯುತ್ತಿರುವ ಹೆಣಗಳ ಕಮರು ವಾಸನೆಯಿದೆ ಎನ್ನುತಾರೆ ವಿಷಾದದಿಂದ.

ಈಗಲಾದರೂ ನಿಜ ಹೇಳು
ಹೋಗಲಿ, ದಯವಿಟ್ಟು
ಈ ದಿಕ್ಕಿಲ್ಲದ ಹೆಣದ ಮೇಲೆ ಆಕಾಶವನ್ನು ಹೊದಿಸು

ಎಂದು ಹೇಳುವಾಗ ನಿಷ್ಠುರ ಸತ್ಯಗಳನ್ನು ಹೇಳುವ ಹಂಬಲವಿದೆ. ಗಾಂಧೀಜಿ ಬಗ್ಗೆ ಮಹಾಸ್ವಪ್ನ ಬರೆದ ಗೀತೆಯಲ್ಲಿ ಸ್ವಾತಂತ್ರ್ಯಾನಂತರದ ದೇಶದ ದುರ್ಗತಿ ಎದ್ದು ಕಾಣುತ್ತದೆ. ಬಾಪೂಜಿ ಕನಸುಕಂಡ ದೇಶವನ್ನು ನಾವು ಕಟ್ಟಿಲ್ಲ.

ಎಷ್ಟೊಂದು ಭ್ರಮಿಸಿದೆ ನಮ್ಮ ಉಡುಪುಗಳ ನೋಡಿ
ಎಷ್ಟೊಂದು ಶ್ರಮಪಟ್ಟೆ ನಮ್ಮನ್ನು ನಂಬಿ
ನಾವು ಮನುಷ್ಯರಲ್ಲ ಮತ್ತೇನೋ ಹೆಸರಿದೆ ನಮಗೆ

ಎಂದು ಗಾಂಧೀಜಿಯನ್ನು ಸುಟ್ಟು ಕೊಂದ ದೇಶವನ್ನು ಬೈಯುತ್ತಾರೆ.

ನಾಲ್ಕು ಕಡೆ ಆವರಿಸಿಕೊಂಡಿರುವ
ಕಗ್ಗತ್ತಲ ಕಡಲು ನಡುವೆ
ನಿಶ್ಚಲವಾಗಿ ಬೆಳಗುತ್ತಿರುವ ನಿನ್ನ ಕಿರುನಗೆ
ಬಾಪೂ, ಮೋಸಹೋದೆಯೋ ಹೇಗೆ?

ಎಂಬ ಮಾತಿನಿಂದ ಗಾಂಧೀಜಿ ಬಗ್ಗೆ ದೇಶದ ಪ್ರಜೆ ತೋರಿಸಬೇಕಾದ ನಿಷ್ಠೆ ಅಭಾವದಲ್ಲೇ ಮುಕ್ತಾಯವಾಗಿದೆ ಎಂದು ಸೂಚಿಸಲಾಗಿದೆ.

ಪ್ರತಿಕ್ರಿಯೆ

ದಿಗಂಬರ ಕವಿಗಳ ಪ್ರಾಮಾಣಿಕತೆಯ ಬಗ್ಗೆ ಸಂಶಯವಿಲ್ಲ. ಸಮಾಜದ ಬಗ್ಗೆ ಅವರಿಗಿದ್ದ ಕಳಕಳಿಯ ಬಗ್ಗೆ ಎರಡನೆಯ ಮಾತಿಲ್ಲ. ಸಮಕಾಲೀನ ಜೀವನ ಸಂಪೂರ್ಣವಾಗಿ ಬದಲಾಗಿ ಸ್ವಚ್ಛವಾದ, ಪ್ರಾಮಾಣಿಕವಾದ ಸಮಾಜ ನಿರ್ಮಾಣವಾಗಬೇಕೆಂದು ಬಯಸುವುದರಲ್ಲಿ, ದೋಷವೇನೂ ಇಲ್ಲ. ಆದರೆ ದಿಗಂಬರ ಕವಿಗಳು ಆಯ್ದುಕೊಂಡ ಮಾರ್ಗವೇ ಅನೇಕರಿಗೆ ಹಿಡಿಸಲಿಲ್ಲ. 'ವಿಧ್ವಂಸದಿಂದ ಪ್ರಗತಿ ಸಾಧ್ಯವೇ' ಎಂಬುದು ಅವರ ಪ್ರಶ್ನೆ. ಇರುವುದೆಲ್ಲವನ್ನೂ ನಾಶಗೊಳಿಸಿದರೆ ವಿನೂತನ ಸಮಾಜದ ನಿರ್ಮಾಣ ಸಾಧ್ಯವಾಗುತ್ತದೆಯೇ ಎಂದು ಅವರು ಪ್ರಶ್ನಿಸಿದರು. ದಿಗಂಬರ ಕವಿಗಳು ಅಸಭ್ಯ, ಅಸಹ್ಯ, ಅಶ್ಲೀಲ ಪದಜಾಲದಿಂದ ಕೋಪವನ್ನು ಉಂಟುಮಾಡುತ್ತಾರೆಯೇ ಹೊರತು ಕನಿಕರವನ್ನಲ್ಲ ಎಂದವರೂ ಉಂಟು.

ಸಮಾಜದಲ್ಲಿ ಸಾಹಿತ್ಯದಲ್ಲಿ ಸದಾಕಾಲ ಮುನ್ನೋಟವನ್ನೇ ಬಯಸುವ ಶ್ರೀ ಶ್ರೀಯಂತಹ ಪ್ರಗತಿಶೀಲ ಕವಿಗಳು ಮಾತ್ರ ದಿಗಂಬರ ಕವಿಗಳನ್ನು ಮೆಚ್ಚಿಕೊಂಡರು. ತುಂಬು ಹೃದಯದಿಂದ ಆಹ್ವಾನಿಸಿದರು. ಶ್ರೀ ಶ್ರೀ ಕೆಲವು ಗೀತೆಗಳನ್ನು ಇಂಗ್ಲಿಷಿಗೆ ಅನುವಾದ ಮಾಡಿದರು. ಕೊನೆಗೆ 'ದಿಗಂಬರ ಕವಿಗಳನ್ನು ಬೆಂಬಲಿಸಿ ಇಲ್ಲವೆ ಬಾಯಿಮುಚ್ಚಿಕೊಳ್ಳಿ' ಎಂದು ಕೂಡಾ ವಿಮರ್ಶಕರಿಗೆ ಸಲಹೆ ಇತ್ತರು.

ಆದರೆ ತೆಲುಗು ವಿಮರ್ಶಾ ಲೋಕದಲ್ಲಿ ದಿಗಂಬರ ಕವಿಗಳನ್ನು ತೆಗಳಿದವರೇ ಹೆಚ್ಚು ಮಂದಿ. ವಿಶ್ವನಾಥ ಸತ್ಯನಾರಾಯಣ ರಂತಹ ಪಂಡಿತ ಕವಿಗಳು 'ದಿಗಂಬರ ಕಾವ್ಯ ಚಳವಳಿ ಎಷ್ಟು ಬೇಗ ಬಂದಿತೋ ಅಷ್ಟೇ ಬೇಗ ಮಾಯವಾಗುತ್ತದೆ' ಎಂದು ಆಶೀರ್ವದಿಸಿದರು. ಸೋಮಸುಂದರ್ ಎಂಬ ಕವಿ '೧೯೩೦ ರ ಕ್ರಾಂತಿಕಾರಿ ಕಾವ್ಯಕ್ಕೂ, ೧೯೫೦ರಲ್ಲಿ ತಲೆಯೆತ್ತಿದ ಲೈಂಗಿಕ ಸಾಹಿತ್ಯಕ್ಕೂ ಒಟ್ಟಾಗಿ ಹುಟ್ಟಿದ ವಿಕೃತ ಶಿಶುಗಳೇ ದಿಗಂಬರ ಕವಿಗಳು' ಎಂದರು.

ಕೆ. ಕುಟುಂಬರಾವ್ ಎಂಬ ಪ್ರಸಿದ್ಧ ಸಾಹಿತಿ 'ದಿಗಂಬರ ಕವಿಗಳು ದ್ವೇಷಿಸುವುದೆಲ್ಲವನ್ನೂ ನಾನೂ ದ್ವೇಷಿಸುತ್ತೇನೆ. ಆದರೆ ದಿಗಂಬರಗಳು ಈ ದ್ವೇಷವನ್ನು ಜನರಲ್ಲಿ ಹುಟ್ಟಿಸಬೇಕಾದುದು ಅಗತ್ಯ' ಎಂದರು.

ಪತ್ರಿಕಾ ಸಂಪಾದಕರಾಗಿ, ಲೇಖಕರಾಗಿ ಪ್ರಖ್ಯಾತರಾದ ಪುರಾಣಂ ಸುಬ್ರಹ್ಮಣ್ಯಶರ್ಮ 'ಸಾಹಿತ್ಯರಂಗದಲ್ಲಿ ಉಂಟಾದ ಸ್ತಬ್ಧತೆ ಸಮಕಾಲೀನ ಜೀವನದಲ್ಲಿ ಕಂಡುಬರುವ ಅನ್ಯಾಯ, ಅಕ್ರಮ, ಸೇಡು, ದ್ವೇಷ, ಅಸೂಯೆ—ಇವೆಲ್ಲವುಗಳಿಂದ ಹುಟ್ಟಿದ ವಿಪರೀತ ಧೋರಣೆಯ ಚಳವಳಿ ಇದು' ಎಂದಿದ್ದಾರೆ.

ದಿಗಂಬರ ಕವಿಗಳನ್ನು 'ಲಿಟರರೀ ಅಂಡರ್ ವರ್ಲ್ಡ್ ಸಾಹಿತ್ಯ ರೌಡಿಗಳು' ಎಂದವರಿದ್ದಾರೆ. 'ಕಳೆದ ಸಾವಿರ ವರ್ಷಗಳ ಸಾಹಿತ್ಯ ಚರಿತ್ರೆಯಲ್ಲಿ ಇಷ್ಟು ನೀಚವಾದ ಕುಸಂಸ್ಕೃತಿಯ ರಚನೆಗಳು ನಮಗೆಂದೂ ಬಂದಿಲ್ಲ' ಎಂದು ಕೂಡ ಹೇಳಿದವರಿದ್ದಾರೆ.

ದಿಗಂಬರ ಕವಿಗಳ ರಚನೆಗಳು ಹಿಂದಿ, ಇಂಗ್ಲಿಷ್, ಕನ್ನಡ, ತಮಿಳು, ಪಂಜಾಬಿ, ಬಂಗಾಳಿ, ಅಸ್ಸಾಮಿ, ಒರಿಯಾ, ಉರ್ದು ಭಾಷೆಗಳಿಗೆ ಅನುವಾದಗೊಂಡಿವೆ.

ಕನ್ನಡ ದಿಗಂಬರ ಕವಿಗಳು

ತೆಲುಗಿನ ದಿಗಂಬರ ಕಾವ್ಯದ ೩೦ ಕವನಗಳನ್ನು ರಕ್ತಾಕ್ಷಿ, ಯುಗಾಂತಕ ಎಂಬ ಕವಿಗಳು ಕನ್ನಡಕ್ಕೆ ಅನುವಾದಿಸಿ ೧೯೭೨ ಜನವರಿ ೩೦ರಂದು ಪ್ರಕಟಿಸಿದರು. ಆರ್ವಿಯಸ್ ಸುಂದರಂ (ರಕ್ತಾಕ್ಷಿ), ಕೆ. ನಾರಾಯಣಸ್ವಾಮಿ (ಯುಗಾಂತಕ) ಎಂಬ ಈ ಇಬ್ಬರು ಕವಿಗಳು ತೆಲುಗು ದಿಗಂಬರ ಕವಿಗಳಂತೆಯೇ ತಮ್ಮ ಹೆಸರುಗಳನ್ನು ಬದಲಾಯಿಸಿಕೊಂಡಿದ್ದಲ್ಲದೆ, ತಮ್ಮ ಕವನ ಸಂಕಲನವನ್ನು ಅತಿಸಾಮಾನ್ಯ ಜನರಿಂದ ಬೆಂಗಳೂರು, ಮೈಸೂರು, ಗುಲ್ಬರ್ಗಾಗಳಲ್ಲಿ ಏಕಕಾಲಕ್ಕೆ ಬಿಡುಗಡೆ ಮಾಡಿಸಿದರು. ಈ ಅಪೂರ್ವ ಸಮಾರಂಭ ಕನ್ನಡ ಸಾಹಿತ್ಯ ಲೋಕದಲ್ಲಿ ಸಂಚಲನವನ್ನುಂಟುಮಾಡಿತು. ಎಲ್ಲ ಪ್ರಮುಖ ಪತ್ರಿಕೆಗಳೂ ಇದನ್ನು ಸವಿವರವಾಗಿ ವರದಿ ಮಾಡಿದುವು. ಕೆಲವು ಪತ್ರಿಕೆಗಳು ಸಂಪಾದಕೀಯಗಳನ್ನೂ ಅಂಕಣಗಳನ್ನೂ ಬರೆದುವು. ವಿಮರ್ಶಕರು ನಾನಾ ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಕನ್ನಡದ ಕೆಲವು ಬಂಡಾಯ ಸಾಹಿತಿಗಳಿಗೆ ದಿಗಂಬರ ಕಾವ್ಯದ ಅನುವಾದ ಪ್ರೇರಣೆ ನೀಡಿತು. ಹಾಮಾ ನಾಯಕರಂಥ ಪ್ರಮುಖ ಅಂಕಣಕಾರರು 'ಇದು ದಿಗಂಬರವಾಗಿ ಏನೋ ಇದೆ. ಆದರೆ ಕಾವ್ಯವಾಗಬೇಕಾಗಿದೆ' ಎಂದು ತೀರ್ಪು ಕೊಟ್ಟರು. ದಿಗಂಬರ ಕಾವ್ಯದ ಇನ್ನೊಂದು ಅನುವಾದವನ್ನು ಗುರುಮೂರ್ತಿ ಪೆಂಡಕೂರು ೧೯೮೮ರಲ್ಲಿ ಪ್ರಕಟಿಸಿದರು.

ಪರಿಣಾಮ

ದಿಗಂಬರ ಕಾವ್ಯ ಸಾಧಿಸಿದ್ದಾದರು ಏನು? ತೆಲುಗು ಸಾಹಿತ್ಯಕ್ಕೆ ಇದರ ಅಗತ್ಯವಿತ್ತೆ? ದಿಗಂಬರ ಕಾವ್ಯದ ಪರಿಣಾಮ

ವೇನು? ಇವೆಲ್ಲ ಸಾಹಿತ್ಯಾಸಕ್ತರ ಗಮನ ಸೆಳೆಯುವ ಪ್ರಶ್ನೆಗಳು. ದಿಗಂಬರ ಕಾವ್ಯ ಬೇಕಾಗಿತ್ತು; ಆದರೆ ಅಶ್ಲೀಲತೆ ಬೇಕಾಗಿರಲಿಲ್ಲ ಎಂಬುದು ಅನೇಕರ ಮಾತು. ಇಟಾಲಿಯನ್ ನೆಲೋರಿಸಿ ಹೇಳುವಂತೆ 'ಇಂದು ಕಬ್ಬಿಣದ ಕಂಠ, ಉಕ್ಕಿನ ನಾಲಗೆ ಬೇಕು. ಒಂದು ಮೃದುವಾದ ಒಳ್ಳೆಯ ಮಾತನ್ನು ಹೇಳಲು' ಎಂಬ ಮಾತು ದಿಗಂಬರ ಕಾವ್ಯಕ್ಕೆ ಪೀಠಿಕೆಯಂತಹುದು. ಜೀವನ ವಾಸ್ತವಿಕತೆಯನ್ನು ಗುರುತಿಸದ ಕಾವ್ಯದ ಮೇಲೆ ದಿಗಂಬರ ಕಾವ್ಯ ದಂಗೆ ಎದ್ದಿತು ಎನ್ನಬಹುದು. ದಿಗಂಬರ ಕಾವ್ಯ ನಕಾರಾತ್ಮಕ ಪ್ರತಿಕ್ರಿಯೆಯೇ ಹೊರತು ಸಕಾರಾತ್ಮಕವಲ್ಲ ಎಂದು ಕ್ರಾಂತಿಕಾರಿ ಮನೋಭಾವದ ಲೇಖಕರು ಒಮ್ಮತದಿಂದ ಅಭಿಪ್ರಾಯಪಟ್ಟರು. ಇದನ್ನು ದಿಗಂಬರ ಕವಿಗಳು ಕೂಡಾ ಅಂಗೀಕರಿಸಿ ಅನಂತರ ಕಾಲದಲ್ಲಿ (೧೯೭೦) ಶ್ರೀ ಶ್ರೀಯವರ ಅಧ್ಯಕ್ಷತೆಯಲ್ಲಿ ಕ್ರಾಂತಿಕಾರಿ ಲೇಖಕರ ಸಂಘದಲ್ಲಿ ಭಾಗಿಗಳಾದರು. ಮುಖ್ಯವಾಗಿ ನಗ್ನಮುನಿ, ನಿಖಿಲೇಶ್ವರ್, ಚೆರಬಂಡರಾಜು ಸಕ್ರಿಯ ಪಾತ್ರವಹಿಸಿದರು. ಇವರು ಕವಿಗಳಾಗಿ ಪರಿಣಾಮಕಾರಿ ಕೆಲಸವನ್ನು ಮುಂದುವರಿಸಿದರು. ನಗ್ನಮುನಿ 'ಕೊಯ್ಯಗುರ್ರಂ' (ಮರಗುದುರೆ) ಎಂಬ ದೀರ್ಘಕಾವ್ಯದ ಮೂಲಕ ಶ್ರೇಷ್ಠ ಸಾಮಾಜಿಕ ಕಾವ್ಯದಲ್ಲಿ ಪ್ರತಿಷ್ಠೆ ಗಳಿಸಿದರು. ಚೆರಬಂಡರಾಜು ಹಾಡಿನ ಮಾಧ್ಯಮವನ್ನು ಆರಿಸಿಕೊಂಡು ನೂರಾರು ಹಾಡುಗಳನ್ನು ರಚಿಸಿದರು. ಅಕಾಲಮೃತ್ಯುವಿಗೆ ತುತ್ತಾಗುವ ತನಕ (೧೯೮೧) ಕ್ರಾಂತಿಕಾರಿ ಮಾರ್ಗವನ್ನು ಬಿಟ್ಟಿರಲಿಲ್ಲ.

ದಿಗಂಬರ ಕಾವ್ಯಕ್ಕೆ ಅಶ್ಲೀಲತೆ ಬೇಕಾಗಿರಲಿಲ್ಲ, ಹೇಳಿಕೆಗಳು ಘೋಷಣೆಗಳು ಬೇಕಾಗಿರಲಿಲ್ಲ, ಕವಿತೆಗಳಿಗೆ 'ದಿಕ್' ಎಂಬ

ಹೊಸ ಹೆಸರು ಬೇಕಾಗಿರಲಿಲ್ಲ, ಬಿಡುಗಡೆಯ 'ಸ್ಟಂಟ್' ಬೇಕಾಗಿರಲಿಲ್ಲ. ಹೀಗೆ ಈ ಪಟ್ಟಿಯನ್ನು ಬೆಳೆಸಬಹುದು. ಆದರೆ ದಿಗಂಬರ ಕಾವ್ಯಕ್ಕೆ ಆಧುನಿಕ ತೆಲುಗು ಸಾಹಿತ್ಯ ಚರಿತ್ರೆಯಲ್ಲಿ ಸ್ಥಾನವನ್ನು ಕೊಡಲೇಬೇಕಾಗಿದೆ. ತೆಲುಗಿನ ಕ್ರಾಂತಿಕಾರಿ ಸಾಹಿತ್ಯಕ್ಕೆ ಅದರಿಂದಾದ ಪ್ರೇರಣೆಯನ್ನು ಅಲ್ಲಗಳೆಯುವಂತಿಲ್ಲ. ಲೈಂಗಿಕ ಪ್ರತಿಮೆಗಳಿಂದ ಕವಿತೆಗಳ ಜಡತೆಯನ್ನು ಸಾಮಾಜಿಕ ಜಡತೆಯನ್ನು ಒಡೆದು ಹಾಕಲು ಈ ಕವಿಗಳು ಪ್ರಯತ್ನಿಸಿದ ರೆಂಬುದು ಮಾತ್ರ ನಿಜ. ಕಾಲ್ಪನಿಕ ಕಾವ್ಯದ ಸುಳ್ಳು ವಸ್ತು ಗಳು, ರಮ್ಯತೆ ಮತ್ತು ಶಬ್ದ ಸೌಂದರ್ಯದ ಅವಾಸ್ತವಿಕತೆಗಳು ಕವಿಗಳ ಜವಾಬ್ದಾರಿಯನ್ನು ದಿಕ್ಕೆಡಿಸಿವೆ ಎಂಬುದುದಿಗಂಬರ ಕವಿಗಳ ಅಭಿಪ್ರಾಯ. ಒಟ್ಟಿನಲ್ಲಿ ಆಧುನಿಕ ತೆಲುಗು ಸಾಹಿತ್ಯದಲ್ಲಿ ಈ ದಿಗಂಬರ ಕಾವ್ಯ ಒಂದು ಚಾರಿತ್ರಿಕ ಪಾತ್ರ ನಿರ್ವಹಿಸಿದೆ ಎಂಬುದು ಮಾತ್ರ ನಿಜ.

ಕೆ.ಸಂ. 5208-ಎಂ.ಯು.ಪಿ.ಎಂ.–5,000 ಪ್ರತಿಗಳು–12–11–98

ಕಾಳಿದಾಸನ ನಾಟಕಗಳು—ಡಾ. ಕೆ. ಕೃಷ್ಣಮೂರ್ತಿ
ಅಣ್ಣನ ಆದರ್ಶ—ಡಾ. ಟಿ. ಜಿ. ಸಿದ್ಧಪ್ಪಾರಾಧ್ಯ
ಹೊಸಗನ್ನಡ ಭಾವಗೀತೆಗಳಲ್ಲಿ ಜೀವನ ವಿಕಾಸ—
ದೇವಂಗಿ ಟಿ. ಚಂದ್ರಶೇಖರ
ಸೂರದಾಸ—ಎಂ. ಎಸ್. ಕೃಷ್ಣಮೂರ್ತಿ
ಜನ್ನ—ಡಾ. ಸಿ. ಪಿ. ಕೃಷ್ಣಕುಮಾರ್
ರತ್ನಾಕರ ಮಹಾಕವಿ—ಜಿ. ಬ್ರಹ್ಮಪ್ಪ
ಮಾಘಕವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
ನಿಜಗುಣಶಿವಯೋಗಿ—ಎಚ್. ಗಂಗಾಧರನ್
ಮುದ್ರಾರಾಕ್ಷಸ—ಡಾ. ಎನ್. ಎಸ್. ಅನಂತರಂಗಾಚಾರ್
ರಾಘವಾಂಕ—ಡಾ. ರಾಮೇಗೌಡ
ಮೂರನೆಯ ಮಂಗರಸ ಕವಿ—ಹಂಪ ನಾಗರಾಜಯ್ಯ
ನಾಗಚಂದ್ರ—ಡಾ. ಸಿ. ಪಿ. ಕೃಷ್ಣಕುಮಾರ್
ವಡ್ಡಾರಾಧನೆ—ಹಂಪ ನಾಗರಾಜಯ್ಯ
ಮಹಾಕವಿ ಭಾರವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
ಕವಿ ಮುರಾರಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
ಚನ್ನಬಸವಣ್ಣ—ಓ. ಎನ್. ಲಿಂಗಣ್ಣಯ್ಯ
ಕವಿ ಶ್ರೀಹರ್ಷ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
ಕಬೀರದಾಸ—ಡಾ. ಹಿರಣ್ಮಯ
ವಿದ್ಯಾಪತಿ—ಎಂ. ಎಸ್. ಕೃಷ್ಣಮೂರ್ತಿ
ಕವಿ ಭಟ್ಟನಾರಾಯಣ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
ಕಾವ್ಯದಲ್ಲಿ ಧ್ವನಿ—ಗುರುಪಾದ ಕೆ. ಹೆಗಡೆ
ಪೊನ್ನ—ಎನ್. ಅನಂತರಂಗಾಚಾರ್
ಎಡೆಯೂರು ತೋಂಟದ ಸಿದ್ಧಲಿಂಗಯತಿ—ಓ. ಎನ್. ಲಿಂಗಣ್ಣಯ್ಯ
ದೇವರ ದಾಸಿಮಯ್ಯ—ಕೆ. ಅನಂತರಾಮು
ಸಂಸ್ಕೃತ ಸಾಹಿತ್ಯ—ಡಾ. ಆರ್. ಎಸ್. ಶಿವಗಣೇಶಮೂರ್ತಿ
ಚಾಮುಂಡರಾಯ—ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ
ಶ್ರೀ ಸಮರ್ಥ ರಾಮದಾಸರು—ಬಿ. ಪಿ. ಚಂದ್ರಾಬಾಯಿ
ಉಪಭಾಷಾ ಅಧ್ಯಯನ—ಶಾಲಿನಿ ರಘುನಾಥ
ಭಾರತೀಯ ಮಹಿಳಾ ಪರಂಪರೆ—ಬಿ. ಪಿ. ಚಂದ್ರಾಬಾಯಿ
ಬಂಧುವರ್ಮ—ಬಿ. ಎಸ್. ಸಣ್ಣಯ್ಯ
ಶ್ರೀರಾಮಾಯಣದರ್ಶನಂ—ಒಂದು ಸಮೀಕ್ಷೆ—ಡಾ. ಸಿ. ಪಿ.
ಕೃಷ್ಣಕುಮಾರ್